ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪತ್ರಿಕೆ

ಸಂಪುಟ 10 | ಸಂಚಿಕೆ 19 | ಮೇ 8, 1988 | ಬೆಲೆ: 1-00

ಜನತಾ ಪಕ್ಷದೊಳಗಿನ ಹಗರಣ ಕೂಡಲೇ ನಿಲ್ಲಲಿ

ಎನ್. ಕೆ. ಉಪಾಧ್ಯಾಯ

ಕಳೆದ ಕೆಲವು ತಿಂಗಳುಗಳಿಂದ ಕರ್ನಾಟಕದ ಜನತಾಪಕ್ಷದೊಳಗೆ ತೀವ್ರ ಗುಂಪುಗಾರಿಕೆ ನಡೆಯುತ್ತಿದ್ದು, ರಾಜ್ಯದ ಹಾಗೂ ಇಡೀ ದೇಶದ ಎಡ ಮತ್ತು ಪ್ರಜಾಪ್ರಭುತ್ವವಾದಿ ಜನರ ಮಧ್ಯೆ ಬಹಳ ಅಸಮಾಧಾನ, ಅಸಂತೋಷ, ಅತೃಪ್ತಿಯನ್ನೆಬ್ಬಿಸಿತ್ತು, ರಾಮಕೃಷ್ಣ ಹೆಗಡೆಯವರ ಮುಖಂಡತ್ವದ ವಿರುದ್ಧ ದೇವೇಗೌಡರ ಗುಂಪು ಸತತವಾಗಿ ನಡೆಸುತ್ತಿದ್ದ ಅಂತರ್ಯುದ್ಧ ಮೇ 3ನೇ ತಾರೀಖಿನ ಗುಪ್ತ ಮತದಾನದ ನಂತರ ಕೊನೆಗೊಳ್ಳುತ್ತದೆ, ಜನತಾ ಪಕ್ಷದಲ್ಲಿ ಐಕ್ಯತೆ ಸಾಧನೆಯಾಗುತ್ತದೆ, ಕರ್ನಾಟಕದಲ್ಲಿ ಆಡಳಿತ ನಡೆಸುತ್ತಿರುವ ಜನತಾ ಪಕ್ಷದವರು, ದೇಶದಲ್ಲಿ ಸಿ.ಪಿ.ಐ (ಎಂ) ಮತ್ತು ಇತರ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳು ರಾಜೀವ ಗಾಂಧಿ ಸರಕಾರದ ವಿರುದ್ಧ ನಡೆಸುತ್ತಿರುವ ಸತತ ಹೋರಾಟಕ್ಕೆ ಸಹಾಯಕವಾಗಿ ಎದ್ದು ನಿಂತು ರಾಷ್ಟ್ರದಲ್ಲಿ ಪರ್ಯಾಯ ವ್ಯವಸ್ಥೆ ಮೂಡಿಬರಲು ಅನುಕೂಲ ವಾತಾವರಣ ಹುಟ್ಟಿಸುವುದರಲ್ಲಿ ಭಾಗಿದಾರರಾಗುತ್ತಾರೆಂದು ಜನ ತಿಳಿದಿದ್ದರು. ಆದರೆ ಬಂಡವಾಳಗಾರ ಪಕ್ಷದಲ್ಲಿ ಅಧಿಕಾರಕ್ಕಾಗಿ–ಒಂದೇ ಉದ್ದೇಶದಿಂದ–ನಡೆಯುತ್ತಿರುವ ಜಗಳ ಪಕ್ಷ ಹಾಳಾಗುವ ತನಕ ಕೊನೆಗೊಳ್ಳುವುದಿಲ್ಲ, ಕಾಂಗ್ರೆಯನ್ನು ಅಧಿಕಾರದಿಂದಿಳಿಸಿ, ದೇಶದಲ್ಲಿ ಪರ್ಯಾಯ ವ್ಯವಸ್ಥೆಯನ್ನು ರೂಢಿಸುವ ತವಕ ಅವರಲ್ಲಿಲ್ಲ ಎಂಬ ಸಂಗತಿ 1979ರಲ್ಲೇ ಕಂಡಿದ್ದೆವು, ಜನತಾ ಪಕ್ಷದ ಮುಖಂಡರು ಆ ಅನುಭವದಿಂದ ಪಾಠ ಕಲಿಯುತ್ತಾರೆ, ತಮ್ಮಲ್ಲಿಯ ಗುಂಪುಗಾರಿಕೆಯನ್ನು; ಅಧಿಕಾರಕ್ಕಾಗಿ ನಡೆಸುವ ಒಳಜಗಳವನ್ನು ಪಕ್ಷದೊಳಗೇನೇ ಪ್ರಜಾಪ್ರಭುತ್ವ ರೀತಿಯಲ್ಲಿ ಬಗೆಹರಿಸಿಕೊಳ್ಳುತ್ತಾರೆಂಬ ಆಸೆಯನ್ನು ಸಿ.ಪಿ.ಐ.(ಎಂ) ಹಾಗೆಯೇ ಕಾಂಗ್ರೆಯೇತರ ಶಕ್ತಿಗಳು ಹೊಂದಿದ್ದರು ಆದರೆ ಮೇ ಮೂರರ ನಂತರದ ಘಟನೆಗಳು ಅದನ್ನು ಮಣ್ಣುಗೂಡಿಸುತ್ತಿವೆ,

ಮೇ 3ರ ಚುನಾವಣೆಯಲ್ಲಿ ರಾಮಕೃಷ್ಣ ಹೆಗಡೆ ಮುಂದಾಳತ್ವಕ್ಕೆ 109 ಶಾಸಕರು ತಮ್ಮ ವಿಶ್ವಾಸ ವ್ಯಕ್ತಪಡಿಸಿದ್ದಾರೆ, ಅದರ ಜೊತೆಯಲ್ಲಿಯೇ ತಮ್ಮ ಮಂತ್ರಿ ಪದವಿಗೆ ರಾಜೀನಾಮೆ ಇತ್ತಿದ್ದೇನೆಂಬ ಸುದ್ದಿ ಪ್ರಕಟವಾಗುತ್ತಿದ್ದಂತೆಯೇ ಶಿವಕಾಂತ ಚತುರೆಯವರು ಒಂದು ಹೇಳಿಕೆ ನೀಡಿ ತನಗೆ ರಾಮಕೃಷ್ಣಹೆಗಡೆಯವರ ಮುಖಂಡತ್ವದಲ್ಲಿ ಅಚಲ ವಿಶ್ವಾಸ ಎಂದೆಂಬ ಹೇಳಿಕೆ ನೀಡಿದ್ದಾರೆ, ಅಷ್ಟೇ ಅಲ್ಲ ತನ್ನ ಮೇಲೆ ಯಾರೂ ಒತ್ತಾಯ ಮಾಡಿಲ್ಲೆಂಬುದನ್ನೂ ಬಹಿರಂಗಗೊಳಿಸಿದ್ದಾರೆ.

ಗುಪ್ತ ಮತದಾನ ನಡೆಯಬೇಕೆಂದು ವಿರೋಧಿ ಗುಂಪು ಪಟ್ಟು ಹಿಡಿದಿತ್ತು, ರಾಮಕೃಷ್ಣಹೆಗಡೆಯವರು ಅದನ್ನು ವಿರೋಧಿಸಿದ್ದರು, ಬಹುತೇಕ ಕೊನೆಯಲ್ಲಿ ಒಮ್ಮತ ಬರಲೆಂಬ ಕಾರಣದಿಂದಲೋ ಅಥವಾ ಕೇಂದ್ರ ವೀಕ್ಷಕರ ಒತ್ತಾಯಕ್ಕೆ ಮಣಿದೋ ಗುಪ್ತ ಮತದಾನಕ್ಕೆ ಒಪ್ಪಿಗೆ ನೀಡಿದ್ದರು, ಹಾಗಿರುವಾಗ ಬಹುಮತ ಶಾಸಕರ ಅಭಿಪ್ರಾಯಕ್ಕೆ ತಲೆಬಾಗಿ ಪಕ್ಷದ ಐಕ್ಯತೆಯನ್ನು ಕಾಪಾಡಿ, ಆಡಳಿತೆಯನ್ನು ಸುಧಾರಿಸುವ, ಜನಪರ ಯೋಜನೆಗಳನ್ನು ಕೈಗೊಳ್ಳುವ, ಭ್ರಷ್ಟಾಚಾರ ನಿರ್ಮೂಲನೆ ಮಾಡುವ ಕಾರ್ಯಗಳತ್ತ ಗಮನ ಹರಿಸಿ ಇನ್ನೆರಡು ವರ್ಷಗಳಲ್ಲಿ ಬರಲಿರುವ ವಿಧಾನಸಭೆ ಲೋಕಸಭೆ ಚುನಾವಣೆಗಳಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಜೊತೆ ಸೇರಿ ತನ್ನ ಹಾಗೂ ಎಡ ಪಕ್ಷಗಳ ನೆಲೆಯನ್ನು ಭದ್ರಗೊಳಿಸುವ ಕಾಂಗ್ರೆ ಮತ್ತು ಜಾತೀವಾದಿಪಕ್ಷಗಳನ್ನು ಇನ್ನಷ್ಟು ಬಲಹೀನಗೊಳಿಸುವ ಮಹಾಕಾರ್ಯದಲ್ಲಿ ವಿರೋಧಿ ಗುಂಪು ತೊಡಗುವುದು ಅತ್ಯಗತ್ಯ. ಅದನ್ನು ಬಿಟ್ಟು ವಿಧಾನಪರಿಷತ್ ಸದಸ್ಯರಿಗೆ ಮತದಾನದ ಹಕ್ಕು ನೀಡಲಾಯಿತು, ಒತ್ತಾಯದಿಂದ ಕೈಹಿಡಿದು ಹೆಗಡೆಪರ ಮತಹಾಕಿಸಲಾಯಿತು, ಪಕ್ಷದ ಅಧ್ಯಕ್ಷರು ನಿರೂಪಿಸಿರುವ ನಿಯಮಗಳನ್ನು ಉಲ್ಲಂಘಿಸಿ ಚುನಾವಣೆ ನಡೆಸಲಾಯಿತು. ಎಂದು ಹಲವಾರು ಆರೋಪಗಳನ್ನು ಹೊರಿಸುತ್ತಾ ಮತ್ತೊಮ್ಮೆ ಚುನಾವಣೆಯಾಗಬೇಕೆಂದು ಹಟಹಿಡಿಯುವುದು, ಆ ರೀತಿ ಆಗದಿದ್ದಲ್ಲಿ ದೇವೇಗೌಡರನ್ನೊಳಗೊಂಡು ಭಿನ್ನಮತೀಯರೆಲ್ಲ ರಾಜ್ಯಾದ್ಯಂತ ತಿರುಗಾಡಿ ಸಭೆಗಳ ಮೂಲಕ ತಮ್ಮ ಪಕ್ಷದ ಸರ್ಕಾರದ ವಿರುದ್ಧವೇ ಪ್ರಚಾರ ಮಾಡುತ್ತೇವೆಂದು ಬೆದರಿಸುತ್ತಿರುವುದು ತೀರಾ ನಾಚಿಕೆ ಗೇಡಲ್ಲದೆ ಮತ್ತೇನಲ್ಲ. ಈ ರೀತಿಯ ವರ್ತನೆ ತಮ್ಮ ಕಾಲ ಮೇಲೆ ತಾವೇ ಕಲ್ಲು ಹಾಕಿ ಕೊಂಡು ತಮ್ಮ ಪಕ್ಷದ ಅವನತಿಗೆ ಕಾರಣರಾಗುವುದರಲ್ಲಿ ಸಂಶಯವಿಲ್ಲ. ಆ ರೀತಿ ಮಾಡಿದ್ದಾದ್ದರೆ ರಾಜ್ಯದ ಜನತೆಗೆ ದ್ರೋಹ ಬಗೆದಂತೆಯೇ ಸರಿ ಹಾಗೆಯೇ ಮತ್ತೆ ಅಧಿಕಾರಕ್ಕೆ ಬರಲು ಹಾತೊರೆಯುತ್ತಿರುವ ಕಾಂಗ್ರೆ ಪಕ್ಷಕ್ಕೆ ಅನುಕೂಲ ಮಾಡಿಕೊಟ್ಟಂತೆಯೇ ಆಗುತ್ತದೆಂಬುದನ್ನು ಭಿನ್ನ ಮತೀಯರು ಅರಿತುಕೊಳ್ಳುವುದು ಅತ್ಯಗತ್ಯ.

ಶಾಸಕಾಂಗ ಪಕ್ಷದ ಸಭೆಯು ಅಂದರೆ ಮೇ 3ರ ಸಭೆಯ ಒಂದು ವಾರ ಮುಂಚಿತವಾಗಿ ರಾಮಕೃಷ್ಣ ಹೆಗಡೆಯವರು ದ.ಕ, ಕಾರವಾರ, ಶಿವಮೊಗ್ಗ ಜಿಲ್ಲೆಗಳಲ್ಲಿ ಸಂಚಾರ ಮಾಡಿ

(6ನೇ ಪುಟ ನೋಡಿ)

ಗುಡ್ಡಗಾಡು ಅಭಿವೃದ್ಧಿ ಮಂಡಳಿ: ಎಡರಂಗ ಸರಕಾರದ ದೃಢ ನಿಲುವು

ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಜಿಲ್ಲೆಯ ಘೂರ್ಕಾ ಸಮಸ್ಯೆಯ ಕುರಿತಾದ ಪರಸ್ಪರ ಒಪ್ಪಿಕೊಂಡ ಪರಿಹಾರದಿಂದ ಸುಭಾಷ್ ಘೈಸಿಂಗ್ ತಪ್ಪಿಸಿಕೊಳ್ಳಲು, ವಚನಭ್ರಷ್ಟತೆಗೆ ಪ್ರಯತ್ನಿಸಿದರೂ ಎಡರಂಗ ದೆಹಲಿಯಲ್ಲಿ ದ್ವಿಪಕ್ಷೀಯ ಸಭೆಯಲ್ಲಾದ ಒಪ್ಪಂದಕ್ಕೆ ಬದ್ಧವಾಗಿದ್ದು ಅದನ್ನು ಜಾರಿಗೆ ತರಲು ಕಾತುರವಾದಿದೆ ಎಂದು ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿ ಜ್ಯೋತಿ ಬಸು ಹೇಳಿದ್ದಾರೆ, ಅವರು ಏಪ್ರಿಲ್ 22 ರಂದು 'ಪೀಪಲ್ಸ ಡೆಮಾಕ್ರಸಿ' ಪತ್ರಿಕೆಗೆ ನೀಡಿದ ಸಂದರ್ಶನವೊಂದರಲ್ಲಿ ಇದನ್ನು ಹೇಳಿದ್ದಾರೆ,

ದೆಹಲಿಯಲ್ಲಿ ಕೇಂದ್ರ ಗೃಹಮಂತ್ರಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮತ್ತು ಸುಭಾಷ್ ಘೈಸಿಂಗ್ ಭಾಗವಹಿಸಿದ್ದ ತ್ರಿಪಕ್ಷೀಯ ಸಭೆಯಲ್ಲಿರುವ ಸ್ಯಯ ಅಂತಿಮ ಇತ್ಯರ್ಥಕ್ಕೆ ಕಲ್ಕತ್ತೆಯಲ್ಲಿ ಇನ್ನೊಮ್ಮೆ ಸಭೆ ಸೇರಲು ನಿರ್ಧರಿಸಲಾಗಿತ್ತು, ದೆಹಲಿ ಸಭೆಯ ನಂತರ, ಕಲ್ಕತ್ತೆಯಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಸಭೆ ನಡೆಯಬೇಕಾಗಿತ್ತು; ರಾಜ್ಯ ಸರ್ಕಾರ ಗುಡ್ಡಗಾಡು ಅಭಿವೃದ್ಧಿ ಮಂಡಳಿಯ ಕರಡು ಮಸೂದೆಯನ್ನು ತಯಾರಿಸಿ ನಂತರ ಕಲ್ಕತ್ತಾದಲ್ಲಿ ತ್ರಿಪಕ್ಷಿಯ ಸಭೆ ನಡೆಸಿ ಇದರ ಬಗ್ಗೆ ಅಂತಿಮ ತೀರ್ಮಾನಕ್ಕೆ ಬರುವುದೆಂದೂ ದೆಹಲಿ ಸಭೆಯಲ್ಲಿ ಒಪ್ಪಲಾಗಿತ್ತು.

ತಾನು ಒಪ್ಪಿಕೊಂಡ ಪ್ರಕಾರ ರಾಜ್ಯ ಸರ್ಕಾರ ಕರಡು ಮಸೂದೆಯನ್ನು ಏಪ್ರಿಲ್ 6ರಂದೇ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿತು. ಆದರೆ ಘೀಸಿಂಗ್ ತಾನು ಪ್ರಧಾನಮಂತ್ರಿಗಳು ಆಹ್ವಾನಿಸಿದರೆ ಮಾತ್ರವೇ ತ್ರಿಪಕ್ಷೀಯ ಸಭೆಯಲ್ಲಿ ಭಾಗವಹಿಸುವುದು ಎಂದು ನಿಲುವು ಬದಲಿಸಿದರು, ಮಾತ್ರವಲ್ಲ ಗುಡ್ಡಗಾಡು ಅಭಿವೃದ್ಧಿ ಮಂಡಳಿಯ ಕುರಿತಾದ ಒಪ್ಪಂದವನ್ನೇ ಪ್ರಶ್ನಿಸಲಾರಂಭಿಸಿದರು!

ವಾಸ್ತವವಾಗಿ ದೆಹಲಿಯ ಸಭೆಯಲ್ಲಿ ಒಪ್ಪಿಕೊಂಡು ಕಲ್ಕತ್ತೆಗೆ ಮರಳಿದ ದಿನದಿಂದಲೇ ಘೈಸಿಂಗ್ ತನ್ನ ನಿಲುವು ಬದಲಿಸಿ, ತಾನಿತ್ತ ಮಾತಿನಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಆರಂಭಿಸಿದರೆಂದು ಜ್ಯೋತಿಬಸು ಹೊರಗೆಡಹಿದ್ದಾರೆ. ತ್ರಿಪಕ್ಷೀಯ ಸಭೆಯಲ್ಲಿ ಅಭಿವೃದ್ಧಿ ಮಂಡಳಿ ಕುರಿತಾದ ಪಕ್ಷರ ಒಪ್ಪಿಗೆಯಿತ್ತು ಸಂಪೂರ್ಣವಾದಿ ನಿರ್ಲಕ್ಷಿಸಿ ತನ್ನ ಹಳೇ ಬೇಡಿಕೆಗಳನ್ನೇ ಪುನರುಚ್ಚರಿಸಿದರು, ಮನವಿ ಪತ್ರವನ್ನು ಅವರು ಗೃಹಮಂತ್ರಿಗೆ ಕಳುಹಿಸಿದರು, ಅದು ಅಲ್ಲಿಂದ ಮುಖ್ಯಮಂತ್ರಿಗಳ ಕೈ ಸೇರಿದಾಗ ಮುಖ್ಯಮಂತ್ರಿಗಳು ಈ ಹೊಸ ಬೆಳವಣಿಗೆ ಬಗ್ಗೆ ಗೃಹಮಂತ್ರಿಗಳನ್ನು ವಿಚಾರಿಸಿದರು. ಅದಕ್ಕೆ ಉತ್ತರವಾಗಿ ಈ ಹೊಸ ಮನವಿ ಪತ್ರವನ್ನು ಗಮನಿಸಬೇಕಾಗಿಲ್ಲ. ಕೇಂದ್ರ ಸರ್ಕಾರ ದೆಹಲಿ ಸಭೆಯ ನಿಲುವಿಗೆ ಬದ್ಧವಾಗಿದೆ ಎಂದು ಗೃಹಮಂತ್ರಿಗಳು ಸ್ಪಷ್ಟಪಡಿಸಿದ್ದರು ಎಂದು ಜ್ಯೋತಿ ಬಸು ಮುಂದುವರಿಯುತ್ತಾ ಈ ಸಂದರ್ಭದಲ್ಲಿ ತಿಳಿಸಿದರು.

ಕೇಂದ್ರ ಸರ್ಕಾರ ಹಿಂಸಾಚಾರ ನಿಲ್ಲಿಸುವಂತೆ ಘೀಸಿಂಗ್‌ರನ್ನು ಒಪ್ಪಿಸುವುದಾಗಿ ಭರವಸೆ ನೀಡಿದ್ದರೂ ಜಿ. ಎನ್. ಎಲ್. ಎಫ್. ಹಿಂಸಾಕೃತ್ಯಗಳನ್ನು ನಿಲ್ಲಿಸದಿರುವುದಕ್ಕೆ ಖೇದ ವ್ಯಕ್ತ ಪಡಿಸಿದ ಜ್ಯೋತಿ ಬಸುರವರು ಈ ನಡುವೆ ಸಿ.ಪಿ.ಐ (ಎಂ) ಬೆಂಬಲಿಗರ ತಲೆ ಕಡಿಯುವ ಹೊಸ ಭಯಾನಕ ವಿಧಾನವನ್ನು ಜಿ.ಎನ್.ಎಲ್.ಎಫ್. ಅನುಸರಿಸುತ್ತಿರುವುದನ್ನು ಕಂಡರೆ ಹಿಂಸಾಚಾರ ಬಿಡುವಂತೆ ಘೀಸಿಂಗ್‌ರ ಮೇಲೆ ಪ್ರಭಾವ ಬೀರುವಲ್ಲಿ ಗೃಹಮಂತ್ರಿ ಬೂಟಾಸಿಂಗ್ ವಿಫಲರಾದಂತೆ ಕಾಣುತ್ತದೆ ಎಂದರು.

40 ದಿನಗಳ ಬಂದ್ ಕಾಲದಲ್ಲಿ ಜಿ.ಎನ್.ಎಲ್.ಎಫ್.ನ ಹಿಂಸಾಚಾರವನ್ನು ಏಕೆ ಖಂಡಿಸಲಿಲ್ಲ ಎಂದು ಬೂಟಾಸಿಂಗ್‌ರನ್ನು ವಿಚಾರಿಸಿದಾಗ ಹಿಂಸಾಚಾರ ನಿಲ್ಲದೆ ಮಾತುಕತೆಗಳು ಸಾಧ್ಯವಿಲ್ಲವೆಂದು ತಾನು ಘೀಸಿಂಗ್‌ಗೆ ತಿಳಿಸಿರುವುದಾಗಿ ಗೃಹಮಂತ್ರಿಗಳು ಉತ್ತರಿಸಿದರು. ಬೂಟಾಸಿಂಗ್ ತನ್ನ ಈ ನಿಲುವನ್ನು ಸಾರ್ವಜನಿಕವಾಗಿ ತಿಳಿಸಿದ್ದರೆ ಚೆನ್ನಾಗಿತ್ತು ಎಂದು ಜ್ಯೋತಿ ಬಸು ತಿಳಿಸಿದರು.

ಎಲ್ಲಾ ರಾಜಕೀಯ ಪಕ್ಷಗಳೊಡನೆ ಸಮಾಲೋಚಿಸಿ ಪಶ್ಚಿಮಬಂಗಾಳದ ವಿಧಾನ ಸಭೆಯಲ್ಲಿ ಪ್ರಸಕ್ತ ಅಧಿವೇಶನದಲ್ಲಿ ಈ ಮಸೂದೆಯನ್ನು ಮಂಡಿಸುವುದಾಗಿ ಎಡರಂಗ ಸರ್ಕಾರ ನಿರ್ಧರಿಸಿದ್ದರೂ, ಏಪ್ರಿಲ್ 28ರಂದು ಬೂಟಾಸಿಂಗ್ ಹಾಗೂ ಜ್ಯೋತಿ ಬಸುರವರ ನಡುವೆ ನಡೆದ ಮಾತುಕತೆಯ ನಂತರ ಅದನ್ನು ಸದ್ಯಕ್ಕೆ ಮುಂದೂಡಿ ಇನ್ನಷ್ಟು ಮಾತುಕತೆಯ ನಂತರ ಒಂದು ವಿಶೇಷ ಅಧಿವೇಶನ ಕರೆದು ಅದರಲ್ಲಿ ಈ ಮಸೂದೆಯನ್ನು ಮಂಡಿಸಬಹುದೆಂಬ ಗೃಹಮಂತ್ರಿಗಳ

(6ನೇ ಪುಟ ನೋಡಿ)

ನೀರಾವರಿಯ ರಾಜಕೀಯ

ಈ ಲೇಖನವನ್ನು ಬರೆಯುವ ವೇಳೆಯಲ್ಲಿ ಜನತಾ ಪಕ್ಷದೊಳಗೆ ನಡೆಯುತ್ತಿರುವ ರಾಜಕೀಯ ತಿಕ್ಕಾಟದ ಒಂದು ಮುಖ್ಯ ನೀರಾವರಿ ಯೋಜನೆಗಳಿಗೆ ಹಣ ನೀಡಲಿಲ್ಲ ಎಂಬುದು ಎಂದು ಪ್ರಸ್ತಾಪಿಸಲ್ಪಟ್ಟಿತು. ದೇವೆಗೌಡರ ಮಂತ್ರಿ ಪದವಿಗೆ ನೀಡಿದ ರಾಜೀನಾಮೆಯ ಪ್ರಮುಖ ಕಾರಣವೇ 87–88ರಲ್ಲಿ 311 ಕೋಟಿ ಎಂದು ಬಜೆಟ್ ಸೂಚನೆ ಯಾಗಿರುವಾಗ ಕೇವಲ188 ಕೋಟಿ ರೂ ನೀಡಲಾಗಿದೆ. 88–89ರ ಬಜೆಟ್‌ನಲ್ಲಿ ಕೂಡ ಬಹಳ ಕಡಿಮೆ ಹಣ ನೀಡಲಾಗಿದೆ ಎಂದು.

ಏಪ್ರಿಲ್ ತಿಂಗಳಲ್ಲಿ ನಡೆದ ಅಲ್ಪ ಕಾಲದ ಅಧಿವೇಶನದಲ್ಲಿ ಬಜೆಟ್ ಮಂಡನೆಯಾಯಿ ತಾದರೂ ಅದರ ಅಂಗವಾಗಿ ವಿವಿಧ ಇಲಾಖೆಗಳ ಪ್ರಗತಿಯ ಮತ್ತು 88–89 ರ ಬಜೆಟ್ ಕಾರ್ಯಕ್ರಮದ ಚರ್ಚೆ ಮೇ 9 ರಂದು ಆರಂಭವಾಗಬೇಕಾದ ವಿಧಾನಸಭಾ ಅಧಿವೇಶನದಲ್ಲಿ ನಡೆಯ ಬೇಕಾಗಿದೆ. ಇಂತಹ ಸಂಧರ್ಭದಲ್ಲಿ ಕರ್ನಾಟಕದಲ್ಲಿ ನೀರಾವರಿಯ ಪರಿಸ್ಥಿತಿಯೇನು? ಈ ಆರ್ಥಿಕ ಪ್ರಶ್ನೆ ರಾಜಕೀಯ ಪ್ರಶ್ನೆಯಾಗಿ, ಬಿಕ್ಕಟ್ಟಿಗೆ ಕಾರಣವಾಗುವಂತಹ ಪರಿಸ್ಥಿತಿ ಏಕೆ ಉಂಟಾಗಿದೆ ಎಂಬುದನ್ನು ದುಡಿಯುವ ಜನತೆಯ ಹಿತದೃಷ್ಟಿಯಿಂದ ವಿವೇಚಿಸಬೇಕಾಗಿದೆ.

1985ರಲ್ಲಿ ಜನತಾಪಕ್ಷ 139ಸ್ಥಾನಗಳನ್ನು ಗೆದ್ದು ಬಹುಮತದಿಂದ ರಾಜ್ಯವಾಳಲು ಆರಂಭಿಸಿದ ಕೂಡಲೇ, 83–85ರ ಅವಧಿಯಲ್ಲಿ ಮುಸುಕಿನಲ್ಲಿ ಹುದುಗಿದ್ದ ಜನತಾಪಕ್ಷದ ಬಂಡವಾಳಶಾಹಿ-ಭೂಮಾಲಿಕ ಸ್ವರೂಪ ನಿಚ್ಚಳವಾಗಿ ಕಾಣಲಾರಂಭಿಸಿತು. ಅದೇ ಸಮಯದಲ್ಲಿಯೇ ಪಕ್ಷದೊಳಗೇ ಈ ವರ್ಗಗಳ ಪರಸ್ಪರ ತಿಕ್ಕಾಟ ಕೂಡ ಆರಂಭವಾಯಿತು ಎಂಬುದೂ ಸ್ಪಷ್ಟ. ಇಂತಹ ಸಮಯದಲ್ಲಿ ಕರ್ನಾಟಕದಲ್ಲಿ ಜನಗಳ ಮೇಲೆ ತೆರಿಗೆ ಹೇರಿ ವಸೂಲಿ ಮಾಡಿದ ಹಣ ಯಾವ ವರ್ಗದ ಅನುಕೂಲಕ್ಕಾಗಿ ಉಪಯೋಗವಾಗಬೇಕು ಎಂಬ ಪ್ರಶ್ನೆಯೂ ಪ್ರಮುಖವಾಗುವುದು ಸಹಜ.

ಈ ಹಿನ್ನೆಲೆಯಲ್ಲಿ, 1985ರಿಂದ ದೇವೇಗೌಡರು ವಿವಿದೆಡೆಗಳಲ್ಲಿ ಮಾಡುತ್ತಾ ಬಂದ ಭಾಷಣಗಳನ್ನು ಗಮನಿಸಿದರೆ ಒಂದು ಅಂಶ ಸ್ಪಷ್ಟವಾಗುತ್ತದೆ. 1985ರ ಜನತಾ ಪ್ರಣಾಳಿಕೆಯಲ್ಲಿ ಸೇರಿದ್ದ 2 ರೂ.ಗೆ ಅಕ್ಕಿ, ಜನತಾ ಸೀರೆ, ಶಾಲೆಯ ಮಕ್ಕಳಿಗೆ ಪುಸ್ತಕ, ಸಮವಸ್ತ್ರಗಳು ಮೊದಲಾದ ಭರವಸೆಗಳನ್ನು ಕಾರ್ಯಗತಿಗೊಳಿಸಲು ಹಣ ವೆಚ್ಚ ಮಾಡುವುದನ್ನು ಅವರು ಟೀಕಿಸುತ್ತಾ ಬಂದಿದ್ದಾರೆ.

ಈ ಕಾರ್ಯಕ್ರಮಗಳ ಬಗ್ಗೆ ಅವರ ತಾತ್ಸಾರವೇನೇ ಇರಲಿ, ಮುಖ್ಯವಾಗಿ ಕೇಂದ್ರ ಸರಕಾರ ಜೊತೆಗೆ ಸಣ್ಣಪ್ರಮಾಣದಲ್ಲಿಯಾದರೂ ಬಹುತೇಕ ರಾಜ್ಯ ಸರ್ಕಾರಗಳು ಹೇರುತ್ತಿರುವ ಅಪ್ರತ್ಯಕ್ಷ ತೆರಿಗೆ ಹಾಗೂ ದಿನಬಳಕೆ ವಸ್ತುಗಳ ಆಡಳಿತಾತ್ಮಕ ಬೆಲೆ ಏರಿಕೆ (ಅಕ್ಕಿ, ಸೀಮೆಎಣ್ಣೆ ಇತ್ಯಾದಿಗಳ ಬೆಲೆಗಳನ್ನು ಒಂದು ಸರ್ಕಾರಿ ಆಜ್ಞೆಯ ಮೂಲಕ ಏರಿಸಿಬಿಡುವುದು) ಇಂತಹ ಕ್ರಮಗಳಿಂದ ಜರ್ಜರಿತವಾದ ದುಡಿವ ಜನಕ್ಕೆ ಪರಿಹಾರ ಒದಗಿಸುವುದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕರ್ತವ್ಯವೆನ್ನುವುದನ್ನು ಮರೆಯಬಾರದು. ಇದರಲ್ಲಿ ಅನೇಕ ಯೋಜನೆಗಳನ್ನು ಮುಖ್ಯವಾಗಿ ಪುಸ್ತಕ ಹಂಚಿಕೆ ಇತ್ಯಾದಿಗಳನ್ನು ಪ. ಬಂಗಾಳ ಎಡರಂಗ ಸರ್ಕಾರದ ಕಾರ್ಯಾಚರಣೆಯ ಪಾಠ ಎಂಬುದನ್ನು ಮರೆಯಬಾರದು.

ದುಡಿಯುವ ಜನಕ್ಕೆ ಈ ಪರಿಹಾರ ಕಾರ್ಯಕ್ರಮಗಳು ಬೇಕು ಜೊತೆಗೇ ನೀರಾವರಿ ಅಭಿವೃದ್ಧಿಯೂ ಬೇಕು. ಇವೆರಡನ್ನೂ ಜೊತೆಯಲ್ಲಿಯೇ ಕಾರ್ಯಾಚರಣೆಗೆ ತರಬೇಕು. ಈ ಕಾರ್ಯಾಚರಣೆಗಾಗಿ ಅವಶ್ಯಕವಾದ ಹಣಕ್ಕಾಗಿ ದುಡಿವ ಜನದ ಮೇಲೆ ಹೊರೆ ಹೇರಬಾರದು. ಇದು ಹೇಗೆ ಸಾಧ್ಯ? ಈ ಬಗ್ಗೆ ನೀರಾವರಿಗೆ ಹಣ ಬೇಕೆನ್ನುವವರೂ, ನೀರಾವರಿಗೆ ಹಣ ನೀಡದಿರುವವರೂ ಇಬ್ಬರೂ ಯೋಚಿಸಿದ್ದಾರೆಯೆ ಎಂಬುದು ದುಡಿಯುವ ಜನರ ಪ್ರಶ್ನೆ.

36 ವರ್ಷಗಳ ಕಾಲದ ನಿರಂತರ ಕಾಂಗ್ರೆಸ್ ಆಳ್ವಿಕೆಯ ನಂತರ ಜನತಾ ಪಕ್ಷ ಅಧಿಕಾರಕ್ಕೆ ಬಂದಿದೆ.

ಅಪಾರ ನಿರೀಕ್ಷೆಗಳಿಂದ ಜನತಾವನ್ನು ಅಧಿಕಾರಕ್ಕೇರಿಸಿದ ಜನ ಕಾಂಗ್ರೆಸ್ ಸರಕಾರ ರಾಜ್ಯಕ್ಕೆ ತಂದ ಅಧೋಗತಿಯ ಪಥವನ್ನು ಬದಲಿಸಬೇಕೆಂದು ನಿರೀಕ್ಷಿಸುತ್ತಾರೆ, ಆದರೆ ಆ ಪ್ರಯತ್ನವನ್ನು ಜನತಾಪಕ್ಷದಲ್ಲಿ ಯಾರಾದರೂ ಮಾಡಿದ್ದಾರೆಯೇ ಎಂಬುದು ದುಡಿಯುವ ಜನತೆಯ ಪ್ರಶ್ನೆ.

ಆರ್ಥಿಕ ಸಂಪನ್ಮೂಲದ ಮೂಲವನ್ನು ಹಿಗ್ಗಿಸಿಕೊಳ್ಳುವಂತಾಗಿರವುದು, ಅದರ ಜೊತೆ ಜೊತೆಯಲ್ಲಿಯೇ, ಇರುವ ಸಂಪನ್ಮೂಲವನ್ನು ವ್ಯರ್ಥವಾಗದಂತೆ, ಸೋರಿಹೋಗದಂತೆ ಉಪಯೋಗಿಸುವ ಬಗ್ಗೆ, ದಿನನಿತ್ಯ ನೀರಾವರಿಗೆ ಹೆಚ್ಚು ಹಣ ಬೇಕು ಎಂದು ಕೂಗು ಹಾಕುವ ಮಂತ್ರಿಗಳಾಗಲೀ, ನೀಡಲು ಹಣವೆಲ್ಲಿದೆ ಎನ್ನುವವರಾಗಲಿ ಯೋಚನೆ ಮಾಡಿದ್ದಾರೆಯೇ?

ದೇವೇಗೌಡರು ನೀರಾವರಿಗೆ ಹಣ ನೀಡಿ ಎನ್ನುವ ಯಾವ ಸಂದರ್ಭದಲ್ಲಿಯೂ ಕೇಂದ್ರ ಸರ್ಕಾರ ರಾಜ್ಯಗಳ ನೀರಾವರಿ ಅಭಿವೃದ್ಧಿಗೆ ಬೇಕಾದ ಹಣ ನೀಡುತ್ತಿಲ್ಲ ಎಂದು ಒಂದು ಬಾರಿಯಾದರೂ ಹೇಳಿದ್ದಾರೆಯೇ. ರಾಜ್ಯದೆಲ್ಲೆಡೆ ಅವರು ಜನರನ್ನುದ್ದೇಶಿಸಿ ಮಾತನಾಡುವಾಗ ಕೇಂದ್ರ–ರಾಜ್ಯ ಆರ್ಥಿಕ ಸಂಬಂಧಗಳ ಬಗ್ಗೆ ಜನರನ್ನೆಚ್ಚರಿಸಲು ಯಾವ ಪ್ರಯತ್ನವನ್ನೂ ಮಾಡಲಿಲ್ಲವೇಕೆ?

ಅದೇ ರೀತಿ ನೀರಾವರಿ ಹಾಗೂ ಲೋಕೋಪಯೋಗಿ ಖಾತೆಗೆ ನೀಡಿದ ಹಣವನ್ನು ನೇರವಾಗಿ ಕೆಲಸದ ಮೇಲೆ ತೊಡಗುವಂತೆ, ಕಂಟ್ರಾಕ್ಟರ್‌ಗಳ, ಉಪ ಕಂಟ್ರಾಕ್ಟರ್‌ಗಳ, ಭ್ರಷ್ಟ ಇಂಜಿನಿಯರ್‌ಗಳ ಪಾಲಾಗದಂತೆ ಮಾಡುವ ಯಾವುದೇ ಪ್ರಯತ್ನವನ್ನೂ ಅವರು ಮಾಡಿದ್ದಾರೆಯೇ? ರಾಜ್ಯದಲ್ಲಿಯೇ ಆರ್ಥಿಕ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲು ಸಿರಿವಂತ ವರ್ಗಗಳ ಮೇಲೆ, ಭೂಮಾಲಿಕರ ಮೇಲೆ ತೆರಿಗೆಗಳನ್ನು ಹಾಕುವ ಬಗ್ಗೆ ಏನಾದರೂ ಸೂಚಿಸಿದ್ದಾರೆಯೆ? ಇದು ಎಲ್ಲಿಯೂ ವ್ಯಕ್ತವಾಗಿಲ್ಲ. ಇದರ ಅರ್ಥ ಬಡಜನಗಳ ಮೇಲೆ ತೆರಿಗೆ ಹಾಕಿ ಪಡೆದ ಹಣದಿಂದಲೇ ಎಲ್ಲಾ ನೀರಾವರಿ ಲೋಕೋಪಯೋಗಿ ಕೆಲಸಗಳೂ ಆಗಬೇಕು ಆದರೆ ಈ ಕೆಲಸಗಳಿಂದ ಗರಿಷ್ಠ ಪ್ರಯೋಜನ ಪಡೆಯುವ ಆಳುವ ವರ್ಗಗಳ ಮೇಲೆ ಅದರ ಹೊರೆ ಬೀಳಬಾರದು. ಎನ್ನುವ ಶೋಷಕ ಯೋಚನೆಯ ಭಾಗವಾಗಿಯೇ ದೇವೇಗೌಡರು ಮಾತನಾಡುತ್ತಿದ್ದಾರೆಂಬುದು ಸ್ಪಷ್ಟವಾಗುತ್ತದೆ.

ನೀರಾವರಿಗೆ ನೀಡಲು ಹಣವೆಲ್ಲಿದೆ ಎನ್ನುವ ರಾಮಕೃಷ್ಣ ಹೆಗ್ಗಡೆಯವರು ದೇಶದಲ್ಲಿಯೇ ಕರ್ನಾಟಕ ರಾಜ್ಯ ಅತ್ಯಂತ ಕಡಿಮೆ ನೀರಾವರಿಯುಳ್ಳ ರಾಜ್ಯ, ನೀರಾವರಿಯಾಗಬೇಕು ಎನ್ನುವುದು ಎಲ್ಲ ದುಡಿಯುವ ಜನರ ಅಪೇಕ್ಷೆ. ಎರಡು ಕುಂಟೆಯಷ್ಟೇ ಭೂಮಿಯುಳ್ಳವನ ಭೂಮಿಯೇ ಇಲ್ಲದ ಕೃಷಿ ಕಾರ್ಮಿಕನ ಅವಶ್ಯಕತೆಯೂ ಹೌದು. ಕೃಷಿ ಉತ್ಪಾದನೆ ಹೆಚ್ಚಳದಿಂದ ಲಾಭವಾಗುವ ಎಲ್ಲ ವರ್ಗದ ಜನರ ಬೇಡಿಕೆ ಅದು. ಅದಕ್ಕೆ ಹಣವೊದಗಿಸಲು ಪ್ರಯತ್ನ ನಡೆಸಬೇಕು ಎನ್ನುವ ಪ್ರಯತ್ನ ನಡೆಸಿಲ್ಲ ಬದಲಾಗಿ ಬೇಸಾಯದ ರೈತರನ್ನು ನೀರಾವರಿ ರೈತರ ವಿರುದ್ಧ ಎತ್ತಿ ಕಟ್ಟುವ, ನೀರಾವರಿಯಾದರೂ ಅದರ ಆರ್ಥಿಕ ಲಾಭ ದಕ್ಕದ ರೈತರ ಮೇಲೆ ಅಭಿವೃದ್ಧಿ ಕರ, ನೀರಾವರಿ ದರಗಳನ್ನು ಹೇರಿ, ಮತ್ತೆ ದುಡಿದು ಸಣ್ಣದಾಗುವ ರೈತರನ್ನೇ ಹಿಂಡುವ ಪ್ರಯತ್ನವನ್ನಷ್ಟೇ ನಡೆಸಿದ್ದಾರೆ.

(5ನೇ ಪುಟದಿಂದ)

ಕುಯ್ಲು ಮುಗಿಸಿ ವಾಪಾಸಾಗುತ್ತಿದ್ದ ಹರಿಜನ ಮಹಿಳೆಯರು ದಾರಿಯಲ್ಲಿ ಎದುರಾದ ಸಾಮಾನ್ಯ ಉಡುಪುಟ್ಟಿದ್ದ ಎಕ್ಸೈಜ್ ಅಧಿಕಾರಿಯೊಂದಿಗೆ ಸಣ್ಣ ಕಾರಣಕ್ಕೆ ವಾಗ್ವಾದ ನಡೆಯಿತು, ಸಿಟ್ಟಿಗೆದ್ದ ಅಧಿಕಾರಿ ಅವಾಚ್ಯವಾಗಿ ಬೈಯ್ದುದಲ್ಲದೇ ಕೆಲವು ಪೊಲೀಸರ ಸಹಾಯದಿಂದ ಜೀಪಿನಲ್ಲಿ ಬಲಾತ್ಕಾರವಾಗಿ ಹಾಕಿಕೊಂಡು ಚಲ್ಲೆ ನಡೆಸಿ ತನ್ನ ಮನೆಯ ಕೋಣೆಯಲ್ಲಿ ಕೂಡಿ ಹಾಕಿದ. ಮಹಿಳೆಯರ ಮೈಮೇಲಿನ ಒಡವೆ ಮತ್ತು ಹಣ ದೋಚಿದರಲ್ಲದೇ ಅತ್ಯಾಚಾರ ನಡೆಸಲು ಯೋಜನೆ ಹಾಕಿದರು. ಈ ಸುದ್ದಿ ತಿಳಿಯುತ್ತಲೇ ಊರ ಜನ ಹಾಗೂ ಸಂಬಂಧಿಕರು ಈ ಅಧಿಕಾರಿ ಮನೆಯ ಸುತ್ತ ಜಮಾಯಿಸಿದರು. ಮೂರು ನೂರು ರೂಪಾಯಿ ಸಂದಾಯಿಸಿದ ಮೇಲೆಯೇ ಮಹಿಳೆಯರ ಬಿಡುಗಡೆ ಆಯ್ತು.

ಹೀಗೆ ದಿನದಿನಕ್ಕೂ ಅಧಿಕಗೊಳ್ಳುತ್ತಿರುವ ದಬ್ಬಾಳಿಕೆಯ ವಿರುದ್ಧ ಸಂಘಟಿತ ಪ್ರತಿರೋಧ ಬೆಳೆಯುತ್ತಿದೆ. ಹುತಾತ್ಮರಾದ ಕಾ। ವಿದ್ಯಾಸಾಗರ್ ಮತ್ತು ಕಾಂ। ಜೈಲಾಖ್‌ಸಿಂಗ್‌ರವರಿಗೆ ಮಾರ್ಚ್ 22ರಂದು ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಜಾತಿ ದೊಡ್ಡ ಸಂಖ್ಯೆಯಲ್ಲಿ ನೆರೆದಿದ್ದರು. ಕೊಲೆಪಾತಕರಿಗೆ ಶಿಕ್ಷೆ ಹಾಗೂ ಹುತಾತ್ಮರ ಕುಟುಂಬಗಳಿಗೆ ಎರಡು ಲಕ್ಷ ರೂಪಾಯಿಗಳ ಪರಿಹಾರಕ್ಕಾಗಿ ಒತ್ತಾಯಿಸಲಾಯಿತು. ದದಿಯಾ ಜಿಲ್ಲೆಯ ಕಾಂ॥ ರಾಮರ್‌ರವರ ಮೇಲಿನ ದೌರ್ಜನ್ಯನಡೆದ ಘಟನೆಯ ತಕ್ಷಣವೇ ಬಿಹಾರ್ ರಾಜ್ಯದ ಕಿಸಾನ್ ಸಭಾ ಪ್ರಧಾನ ಕಾರ್ಯದರ್ಶಿ ಕಾಂ। ಸುಬೋಧ್‌ರಾಯ್, ಕೃಷಿ ಕೂಲಿಕಾರರ ಸಂಘಟನೆಯ ಪ್ರ.ಕಾ. ಕಾಂ॥ ಸರಂಗ್ದಾರ್ ಪಾಸ್ವಾನ್ ಆ ಪ್ರದೇಶದಲ್ಲೆಲ್ಲಾ ಸಂಚರಿಸಿ, ಘಟನೆಯನ್ನು ಅಭ್ಯಸಿಸಿದರು, ಜಮೀನ್ದಾರ ಹಾಗೂ ಆತನ ಗೂಂಡಾಗಳ ಕೃತ್ಯವನ್ನೂ ಖಂಡಿಸಿ ಕ್ರಮಕ್ಕಾಗಿ ಒತ್ತಾಯಿಸಿದರು. ನಳಂದ ಜಿಲ್ಲೆಯಲ್ಲಿ ಮಹಿಳೆಯರ ಮೇಲೆ ನಡೆದ ಸಮವಸ್ತ್ರಧಾರಿ ಗೂಂಡಾಗಳ ದಬ್ಬಾಳಿಕೆಯನ್ನು ಖಂಡಿಸಿ ಜನವಾದಿ ಮಹಿಳಾ ಸಂಘ (ಎ.ಐ.ಡಿ.ಡಬ್ಲ್ಯು.ಎ)ದ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ॥ ಸುಧಾ ಬಿಂದು ಮಿತ್ರ, ಹಾಗೂ ಸಿಪಿಐ (ಎಂ) ಜಿಲ್ಲಾನಾಯಕ ಕಾಂ। ಬಸ್ರುದ್ದೀನ್ ಅಹ್ಮದ್‌ರವರು ಹಲವಾರು ಬಹಿರಂಗ ಸಭೆ ನಡೆಸಿದ್ದಾರೆ. ಚಳುವಳಿಗೆ ತಯಾರಿ ನಡೆದಿದೆ. ಕಾಂಗ್ರೆಸ್ ಆಡಳಿತದ ದಬ್ಬಾಳಿಕೆ ಜನವಿರೋಧಿ ನೀತಿಗಳಿಗೆದುರಾಗಿ ಹೋರಾಟ ಮುಂದುವರಿದಿದೆ, ರಾಜೀವ್‌ಗಾಂಧಿ ರಾಜೀನಾಮೆ ಕೊಡಲೇಬೇಕೆಂಬ ಕೂಗು ಸಮರ ಘೋಷಣೆಯಾಗುತ್ತದೆ.

ಸಿ.ಪಿ.ಐ. (ಎಂ) ಕಾರ್ಯಕರ್ತರ ವಿರುದ್ಧ 2000 ಸುಳ್ಳು ಮೊಕದ್ದಮೆಗಳು.

ಸೈನ್ಯ ಮತ್ತು ಅರೆ ಮಿಲಿಟರಿ ಪಡೆಗಳನ್ನು ಬಳಸಿ ತ್ರಿಪುರಾದಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆ-ಟಿ.ಯು.ಜೆ.ಎಸ್, ಸಂಯುಕ್ತ ಮಂತ್ರಿಮಂಡಲ ಎಡರಂಗದ ಅದರಲ್ಲೂ ಮುಖ್ಯವಾಗಿ ಸಿಪಿಐ (ಎಂ) ಪಕ್ಷದ ಕಾರ್ಯಕರ್ತರು ಬೆಂಬಲಿಗರ ಮೇಲೆ ತೀವ್ರತರ ಆಕ್ರಮಣ ಆರಂಭಿಸಿದೆ. ಅಧಿಕಾರ ಸೆಳೆದುಕೊಂಡಂದಿನಿಂದ ಇಲ್ಲಿಯವರೆಗೆ ಸಿಪಿಐ (ಎಂ)ನ ವಿರುದ್ಧ 2000 ಸುಳ್ಳು ಮೊಕದ್ದಮೆಗಳನ್ನು ಹೂಡಲಾಗಿದ್ದು ಇದರಲ್ಲಿ 7000 ರಾಜಕೀಯ ಕಾರ್ಯಕರ್ತರನ್ನು ಭಾಗಿಯಾಗಿಸಲಾಗಿದೆ. ಪಕ್ಷದ ಪತ್ರಿಕೆ 'ದೇಶೇರ್ ಕಥಾ' ಪ್ರಕಟವಾಗದಂತೆ ಕಿರುಕುಳ ನೀಡಲಾಗುತ್ತಿದೆ.

ಈ ಎಲ್ಲಾ ಘಟನೆಗಳ ಬಗ್ಗೆ ಸಿಪಿಐ (ಎಂ) ಪಾಲಿಟ್‌ಬ್ಯೂರೋ ಸದಸ್ಯ ಹಾಗೂ ಹಿಂದಿನ ಮುಖ್ಯಮಂತ್ರಿ ಕಾಂ॥ ನೃಪೇನ್ ಚಕ್ರವರ್ತಿಯವರು ರಾಷ್ಟ್ರಪತಿ ಆರ್. ವೆಂಕಟರಾಮನ್‌ರವರಿಗೆ ಬರೆದ ಪತ್ರದಲ್ಲಿ ಇವುಗಳನ್ನು ತಡೆಗಟ್ಟಲು ಕ್ರಮವಹಿಸುವಂತೆ ಆಗ್ರಹಿಸಿದ್ದಾರೆ.

ರಾಜ್ಯದಲ್ಲೆಡೆ ಮೇ ದಿನಾಚರಣೆ

ಕುಂದಾಪುರ :

ಡಿಸೆಂಬರ್ 9ರ ಚಾರಿತ್ರಿಕ ದೆಹಲಿರ್‍ಯಾಲಿ ಮಾರ್ಚ್ 15 ಭಾರತ್ ಬಂದ್‌ಗಳು ಭಾರತದ ಕಾರ್ಮಿಕ ವರ್ಗದ ಹೋರಾಟಗಳ ಫಲಶೃತಿಯಾಗಿದ್ದು ಶೋಷಣಾರಹಿತ ಸಮಾಜ ಸ್ಥಾಪನೆಯ ನಿಟ್ಟಿನಲ್ಲಿ ಕಾರ್ಮಿಕವರ್ಗ ಇನ್ನಷ್ಟು ದೃಢತೆಯಿಂದ ಹೋರಾಡಬೇಕೆಂದು ಕಾಂ॥ ಎನ್. ಕೆ. ಉಪಾಧ್ಯಾಯರು ಕರೆ ನೀಡಿದರು. ಅವರು ಕುಂದಾಪುರದಲ್ಲಿ ಏರ್ಪಡಿಸಿದ್ದ ಮೇ ದಿನಾಚಾರಣೆಯ ಬಹಿರಂಗ ಸಭೆಯಲ್ಲಿ ಮಾತನಾಡುತ್ತಿದ್ದರು.

ಸೋವಿಯತ್ ನಾಯಕ ಗೋರ್ಬಚೆವ್–ಅಮೆರಿಕಾ ಅಧ್ಯಕ್ಷ ರೇಗನ್ ನಡುವೆ ನಡೆದ ಐ. ಎನ್. ಎಫ್. ಒಪ್ಪಂದವು ಜಾಗತಿಕ ಶಾಂತಿ ಸ್ಥಾಪನೆಗಾಗಿ ಅಂತರ ರಾಷ್ಟ್ರೀಯವಾಗಿ ಬೆಳೆದು ಬರುತ್ತಿರುವ ಚಳುವಳಿಗೆ ದೊರಕುತ್ತಿರುವ ವಿಜಯವಾಗಿದ್ದು ಸಾಮ್ರಾಜ್ಯಶಾಹಿ ಶಕ್ತಿಗೆ ಇದು ದೊಡ್ಡ ಹೊಡೆತ ಎಂದು ಅವರು ಹೇಳಿದರು.

ಛಿದ್ರಕಾರಿ ಶಕ್ತಿಗಳೊಂದಿಗೆ ಕಾಂಗ್ರೆಸ್ (ಐ) ಶಾಮೀಲಾಗಿ ದೇಶದ ಐಕ್ಯತೆಗೆ ಮಾರಕವಾದ ನೀತಿಯನ್ನು ಅನುಸರಿಸುತ್ತಿದೆ ಎಂದು ಸಿ. ಐ. ಟಿ. ಯು. ರಾಜ್ಯ ಸಮಿತಿ ಸದಸ್ಯ ಕಾ॥ ಕೆ. ಶಂಕರ್ ಟೀಕಿಸಿದರು. ರೈತ ನಾಯಕ ದಾಸಭಂಡಾರಿ- ಶಿವರಾಮ ಶೆಟ್ಟಿ, ಬೀಡಿ ಕಾರ್ಮಿಕ ನಾಯಕ ಮಹಾಬಲ ಪುರಸಭಾ ಸದಸ್ಯ ನರಸಿಂಹರವರು ಮಾತನಾಡಿದರು. ಸಭೆಗೆ ಪ್ರಾರಂಭದಲ್ಲಿ ವಿವಿಧ ಕಾರ್ಮಿಕ ಸಂಘಗಳ ಕಾರ್ಮಿಕರು, ರೈತ-ಕೃಷಿ ಕೂಲಿಕಾರರು, ರಿಕ್ಷಾ ಚಾಲಕರ ಬೃಹತ್ ಮೆರವಣಿಗೆ ನಡೆಯಿತು.

ಬಿಜಾಪುರ

ರೈತ ಸಂಘದ ಕಛೇರಿಯಲ್ಲಿ ಬೀಡಿ ಕಾರ್ಮಿಕರು, ರೈತರು, ಪೌರ ಕಾರ್ಮಿಕರು, ವಿದ್ಯಾರ್ಥಿ-ಯುವಜನರು ಸೇರಿ ಮೇ ದಿನಾಚರಣೆ ನಡೆಸಲಾಯಿತು. ಕಾ॥ ಆರ್. ಎಚ್. ಕಲಾದಗಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯನ್ನುದ್ದೇಶಿಸಿ ಕಾ॥ ಸೊನ್ನದ, ಮನ್ನುಸಾಬ ಕಲಾದಗಿ ಸದಾನಂದ ಮೋದಿ, ಯವರುಗಳು ಮಾತನಾಡಿದರು, ಕಛೇರಿಯಿಂದ ಮೆರವಣಿಗೆ ಹೊರಟು ಪ್ರಮುಖ ಬೀದಿಯಲ್ಲಿ ಹಾಯ್ದು ಆನಂದ್ ಮಹಲ ಗಾರ್ಡನ್‌ನಲ್ಲಿ ಬಹಿರಂಗ ಸಭೆ ನಡೆಸಲಾಯಿತು, ಎಲ್.ಬಿ. ಲಾಯಗುಂದಿ, ಸುರೇಶ ಅರಳಿ, ಪ್ರಕಾಶ ಹಿಟ್ನಳ್ಳಿಯವರುಗಳು ಮಾತನಾಡಿ ಕಾರ್ಮಿಕರು ಒಗ್ಗಟ್ಟಾಗಿ ಸಮಸ್ಯೆಗಳ ವಿರುದ್ಧ ಐಕ್ಯ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಸೋವಿಯೆತ್ ಪಡೆಗಳು ಅಫ್‌ಘಾನಿಸ್ತಾನ ಪ್ರವೇಶಿಸಿದ್ದು ಏಕೆ?

ಸೋವಿಯೆತ್ ಪಡೆಗಳ ಪ್ರವೇಶದ ಹಿನ್ನೆಲೆಯಲ್ಲಿ

1838—ಅಫ್‌ಘಾನಿಸ್ತಾನದ ಮೇಲೆ ಬ್ರಿಟಿಷ್ ಆಕ್ರಮಣ, ಹಿಮ್ಮೆಟ್ಟಿಸಲ್ಪಟ್ಟಿತು.

1878—ಅಫ್‌ಘಾನಿಸ್ತಾನ ಬ್ರಿಟಿಷ್ ಅಡಿಯಾಳು,

1919—ರಾಜ ಅಮಾನುಲ್ಲಾಖಾನ್ ನಾಯಕತ್ವದಲ್ಲಿ ಹೋರಾಟ, ಸ್ವಾತಂತ್ರ್ಯ

1921—ಸಾಮ್ರಾಜ್ಯಶಾಹಿ ಧಾಳಿ ತಡೆಯಲು ಸೋವಿಯೆತ್-ಅಫ್‌ಘಾನ್ ಒಪ್ಪಂದ

1931—ಬ್ರಿಟಿಷ್ ಸರಕಾರದ ಕುಮ್ಮಕ್ಕಿನಿಂದ ಅಮಾನುಲ್ಲಾ ವಿರುದ್ಧ ಸಫಲ ದಂಗೆ

1931—ಬ್ರಿಟಿಷ್ ಹಿಂಬಾಲಕ ನಾದಿರಖಾನ್ ಪಟ್ಟಕ್ಕೆ, ಹೊಸ ಸಂವಿಧಾನ

1933—ನಾದಿರ್‌ಖಾನ್ ಹತ್ಯೆ

1964—ರಾಜ ಜಾಹಿರ್ ಶಾಹನ ಆಡಳಿತದಲ್ಲಿ ಹೊಸ ಸಂವಿಧಾನ, ಸುಧಾರಣೆಗಳು

1965—PDPA ಪಕ್ಷದ ರಚನೆ, ಮೊದಲ ಚುನಾವಣೆಗಳು

1967—PDPA ಪಕ್ಷದ ಇಬ್ಭಾಗ

1973—ರಾಜ ಜಾಹೀರ್‌ಶಹಾ ಕಿತ್ತು ಹಾಕಿ ಮಹಮ್ಮದ್ ದಾವೂದ್ ನೇತೃತ್ವದಲ್ಲಿ ಕ್ಷಿಪ್ರ ಕ್ರಾಂತಿ.

1977—PDPA ಎರಡು ಬಣಗಳ ಒಗ್ಗೂಡುವಿಕೆ

1978—PDPA ಸಂಸ್ಥಾಪಕ ನಾಯಕ ಖೈಬರ್ ಹತ್ಯೆ, ಸೇನೆ ಬಂಡಾಯ, ಸೌರ್ (ಏಪ್ರಿಲ್) ಕ್ರಾಂತಿ

1979—ಅಧ್ಯಕ್ಷ ಮಹಮದ್ ತರಾಕಿ ಕೊಲೆ, ಹಫಿಜುಲ್ಲಾ ಅಮೀನ್‌ರಿಂದ ಕ್ಷಿಪ್ರ ಕ್ರಾಂತಿ ಬಬ್ರಾಕ್ ಕರ್ಮಾಲ್ ನಾಯಕತ್ವದಲ್ಲಿ ಅಮೀನ್ ವಿರುದ್ಧ ಹೋರಾಟ ಮತ್ತು ಜಯ

ಬಬ್ರಾಕ್ ಕರ್ಮಾಲರ ಸರಕಾರದಿಂದ ಅಫ್‌ಘಾನ್-ಸೋವಿಯೆತ್ ಒಪ್ಪಂದದ ಪ್ರಕಾರ ಸೌರ ಕ್ರಾಂತಿಯನ್ನು ರಕ್ಷಿಸಲು ಸೋವಿಯೆತ್ ಪಡೆಗಳಿಗಾಗಿ ಕೋರಿಕೆ, ಸೋವಿಯೆತ್ ಪಡೆಗಳ ಆಗಮನ,

ಇತ್ತೀಚೆಗೆ ಆದ ಜಿನಿವಾ ಒಪ್ಪಂದದ ಪ್ರಕಾರ ಸೋವಿಯತ್ ಪಡೆಗಳು ಹಿಂತಿರುಗುವ ನಿರ್ಧಾರ ಐತಿಹಾಸಿಕವಾದುದು. ಆದರೆ ಸಾಮ್ರಾಜ್ಯಶಾಹಿ ಪ್ರಚಾರಯಂತ್ರ ಇದರ ಮಹತ್ವ ಕಡೆಗಣಿಸಿ, ಸೋವಿಯತ್ ಪಡೆಗಳು ಪರಾಜಯ ಹೊಂದಿ ಬಂದ ಉದ್ದೇಶ ಸಾಧನೆಯಾಗದೆ ಹಿಂತಿರುಗುತ್ತಿವೆ ಎಂದು ತಿರುಚಿ ಪ್ರಚಾರ ಮಾಡುತ್ತಿದೆ. ಇದರ ಹಿಂದಿನ ಪಿತೂರಿ ತಿಳಿಯುವುದಕ್ಕಾಗಿ ಅಫ್‌ಘಾನಿಸ್ತಾನದಲ್ಲಿ ಸಾರ್ (ಅಫ್‌ಘಾನ್ ಕ್ಯಾಲೆಂಡರಿನಲ್ಲಿ ಏಪ್ರಿಲ್ ತಿಂಗಳ ಹೆಸರು) ಕ್ರಾಂತಿಯ ಹಿನ್ನೆಲೆ, ಆ ಸಮಯದಲ್ಲಿ ವರ್ಗಗಳ ಬಲಾಬಲ, ಮತ್ತು ಸೋವಿಯತ್ ಸೈನ್ಯ ಪ್ರವೇಶ ಅಗತ್ಯವಾದ ಪರಿಸ್ಥಿತಿಯನ್ನು ಕೂಲಂಕುಷವಾಗಿ ವಿಶ್ಲೇಷಿಸುವುದಗತ್ಯ.

ಅಫ್‌ಘಾನಿಸ್ತಾನ ಹಿನ್ನೆಲೆ ಸಮಾಜ ಗುಲಾಮ ವ್ಯವಸ್ಥೆಯ ನಂತರ ಸುಮಾರು 15 ಶತಮಾನಗಳಷ್ಟು ಕಾಲ ಪಾಳೆಯಗಾರಿಗಿಂತಲೂ ಹಿಂದಿನ ಬಣಗಳ ಸಹಜ ವ್ಯವಸ್ಥೆ ಸಹ ಪ್ರಬಲವಾದಿದೆ. 19ನೇ ಶತಮಾನದ ಆದಿಯಿಂದ ಬ್ರಿಟಿಷರು ಈ ದೇಶವನ್ನು ಕಬಳಿಸಲು ಪ್ರಯತ್ನಿಸುತ್ತಿದ್ದು, 1878 ರಲ್ಲಿ ಆದಿನ ರಾಜ ಅಮೀರ್ ಯಾ ತುಬ್ ಖಾನ್ ಜತೆ ಪಿತೂರಿ ನಡೆಸಿ ಆ ದೇಶ ಬ್ರಿಟಿಷರಿಗೆ ಅಡಿಯಾಳಾಗುವಂತೆ ಧನದ ಆಸೆ ತೋರಿಸಿ ಒಪ್ಪಂದ ಮಾಡಿಕೊಂಡರು. ಇದರ ವಿರುದ್ಧ ದೇಶಪ್ರೇಮಿ ದೊರೆ ಅಮಾನುಲ್ಲಾ ಖಾನ್ ನಾಯಕತ್ವದಲ್ಲಿ ನಡೆದ ಹೋರಾಟ 1919 ರಲ್ಲಿ ಸಫಲವಾಗಿ ಕೊನೆಗೊಂಡಿತು.

ಅಫ್‌ಘಾನ್ ಸ್ವಾತಂತ್ರ್ಯ ಹೋರಾಟವೇ ಅಕ್ಟೋಬರ್ ಕ್ರಾಂತಿಯಿಂದ ಸ್ಫೂರ್ತಿ ಪಡೆದಿತ್ತು. ಆದರೂ ಬ್ರಿಟಿಷರಲ್ಲಿ 1931ರಲ್ಲಿ ಅಮಾನುಲ್ಲಾ ಖಾನನ್ನು ಅಧಿಕಾರದಿಂದ ಉರುಳಿಸಲು ಕಾರಸ್ಥಾನದಲ್ಲಿ ಸಫಲರಾದರು. ಅದರ ನಂತರ ಬ್ರಿಟಿಷರ ಕೈಗೊಂಬೆ ದೊರೆಗಳನ್ನು ಬೇಕಾದಾಗ ಅಧಿಕಾರದಲ್ಲಿ ತರುವುದು ಸರಿಬರದಿದ್ದರೆ ಹತ್ಯೆ ಮಾಡಿಸುವುದು ಇದು ಮುಂದುವರಿಯಿತು. ಸಾಮ್ರಾಜ್ಯಶಾಹಿ ಹಸ್ತಕ್ಷೇಪದಿಂದ ಪ್ರಜಾಸತ್ತಾತ್ಮಕ ಸುಧಾರಣೆಗಳು ದೂರವಿರಲಿ, ಬೂರ್ಜ್ವಾ ಚಳುವಳಿಗೂ ಅವಕಾಶವಿರಲಿಲ್ಲ. ಅಫ್‌ಘಾನಿಸ್ತಾನ ಹಿಂದುಳಿದ ಪಾಳೆಯಗಾರಿ ಅಂಧಕಾರದಿಂದ ಹೊರಗೆ ಬರದಂತೆ ಸಾಮ್ರಾಜ್ಯಶಾಹಿ ನೋಡಿಕೊಂಡಿತು. ಎರಡನೇ ಮಹಾಯುದ್ಧ ನಂತರದ ಬದಲಾದ ಪರಿಸ್ಥಿತಿಯಲ್ಲಿ ಸಹ ಅಫ್‌ಘಾನಿಸ್ತಾನದಲ್ಲಿ ಯಾವುದೇ ಬದಲಾವಣೆಯಾಗದಂತೆ ಅಷ್ಟು ಹೊತ್ತಿಗೆ ಪ್ರಬಲವಾಗಿದ್ದ ಅಮೇರಿಕನ್ ಸಾಮ್ರಾಜ್ಯಶಾಹಿ ನೋಡಿಕೊಂಡಿತು. 1964 ರಲ್ಲಿ ಜಾಹಿರ್ ಶಹಾ ಜಾರಿಗೆ ತಂದ ಹೊಸ ಸಂವಿಧಾನದ ಪ್ರಕಾರ 1965 ರಲ್ಲಿ ಚುನಾವಣೆಗಳು ನಡೆದವು. ಈ ಮೊದಲು ಅದೇ ವರ್ಷದಲ್ಲಿ ಪ್ರಗತಿಪರ ಬುದ್ಧಿಜೀವಿಗಳು PDPA (peopleDemocratic Party of Afghanistan) ನ್ನು ರಚಿಸಿದರು, ಇದು ದುಡಿಯುವ ವರ್ಗದ ಸಿದ್ಧಾಂತದ ಮೇಲೆ ಆಧಾರಿತವಾಗಿತ್ತು. ಮೊದಲ ಚುನಾವಣೆಯಲ್ಲೇ PDPA ನಾಲ್ಕು ಸೀಟುಗಳನ್ನು ಪಾರ್ಲಿಮೆಂಟಿನಲ್ಲಿ ಪಡೆಯಿತು.

ಪ್ರಜಾಸತ್ತಾತ್ಮಕ ಚಳುವಳಿ ಬಲಗೊಳ್ಳುತ್ತಾ ಹೋದಂತೆ, PDPA ಇದರ ಕೇಂದ್ರ ಬಿಂದುವಾಯಿತು. 1973 ರಲ್ಲಿ ದಾವೂದ್‌ರ ಕ್ಷಿಪ್ರಕ್ರಾಂತಿ ಸೇರಿದಂತೆ ಹಲವು ರಾಜಕೀಯ ಬದಲಾವಣೆಗಳಾದರೂ ಪ್ರಭುತ್ವ ಸಾಂಪ್ರದಾಯಿಕ ಪಾಳೆಯಗಾರಿ ಶಕ್ತಿಗಳ ಪ್ರಭಾವದಲ್ಲಿ ಉಳಿಯಿತು. ಅಮೆರಿಕ ತನ್ನ ಹಸ್ತಕ್ಷೇಪ ಹೆಚ್ಚಿಸುತ್ತಾ ಹೋಯಿತು. ಇದಕ್ಕನುಗುಣವಾಗಿ ದಾವೂದ್ ಆಡಳಿತ ಪ್ರಜಾಸತ್ತಾತ್ಮಕ ಶಕ್ತಿಗಳ ಮೇಲೆ ಆಕ್ರಮಣ ಹೆಚ್ಚಿಸುತ್ತಾ ಇದು PDPA ಪಕ್ಷವನ್ನು ನಿಷೇಧಿಸುವುದರಲ್ಲೂ ಇದರ ನಾಯಕ ಖೈಬರ್‌ರ ಹತ್ಯೆ ಮಾಡುವಷ್ಟು ಮುಂದೆ ಹೋಯಿತು.

ಸೌರ ಕ್ರಾಂತಿಯ ಸ್ವರೂಪ

ಇದು ಜನರನ್ನು ರೊಚ್ಚಿಗೆಬ್ಬಿಸಿತು. ಸೈನ್ಯವನ್ನು ಸಹ ರೊಚ್ಚಿಗೆಬ್ಬಿಸಿತು. ಅಫ್‌ಘಾನ್ ಸರ್ಕಾರ ಪಾಳೆಯಗಾರಿಯಾಗಿದ್ದರೂ ಸೈನ್ಯದಲ್ಲಿ ಅಧಿಕಾರಿಗಳು ಸೇರಿದಂತೆ ಪ್ರಜಾಸತ್ತಾತ್ಮಕ ಜನವಿಭಾಗದಿಂದ ಬಂದವರು. ಆದ್ದರಿಂದ ಈ ಪರಿಸ್ಥಿತಿಯಲ್ಲಿ ಸೈನ್ಯ ಬಂಡೆದ್ದು ದಾವೂದ್‌ನನ್ನು ಅಧಿಕಾರದಿಂದ ಕೆಳಗೆ ಇಳಿಸಿ, ಅಧಿಕಾರವನ್ನು PDPA ಗೆ ವಹಿಸಿಕೊಟ್ಟಿತು. PDPA ಸೈನ್ಯದಲ್ಲಿ ಸಾಕಷ್ಟು ಪ್ರಭಾವ ಮಾತ್ರವಲ್ಲ ಸದಸ್ಯರನ್ನು ಪಡೆದಿತ್ತು. 1978 ಏಪ್ರಿಲ್‌ನಲ್ಲಿ ನಡೆದ ಈ ಕ್ರಾಂತಿ ಸೌರ್ ಕ್ರಾಂತಿ ಎಂದು ಹೆಸರಾಗಿದೆ. ಈ ಕ್ರಾಂತಿ ದೇಶದ ಪಾಳೆಯಗಾರಿ ಭೂಮಾಲಕರ ಮತ್ತು ಅವರ ಸಾಮ್ರಾಜ್ಯಶಾಹಿ ದೊರೆಗಳ ವಿರುದ್ಧವಾಗಿತ್ತು. ಇದು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕ್ರಾಂತಿಯಾಗಿತ್ತು.

ಇಂತಹ ಕ್ರಾಂತಿಯನ್ನು ಬಲಪಡಿಸಿ ಮುಂದೆ ಒಯ್ಯುವುದು, ಅದೂ-ಶೇಖಡಾ 90 ನಿರಕ್ಷರಸ್ಥರಿರುವ, ಧರ್ಮದ ಬಲವಾದ ಹಿಡಿತವಿರುವ ದುರ್ಬಲ, ಆರ್ಥಿಕ ವ್ಯವಸ್ಥೆ ಇರುವ ಬಹಳ ಸಣ್ಣ ಸಂಖ್ಯೆಯಲ್ಲಿ ಕಾರ್ಮಿಕ ವರ್ಗವಿರುವ-ಅಫ್‌ಘಾನಿಸ್ತಾನದಂತಹ ದೇಶದಲ್ಲಿ ಸುಲಭ ಸಾಧ್ಯವೇನಾದಿರಲಿಲ್ಲ. ಅಲ್ಲದೆ PDPA ಪಕ್ಷದೊಳಗಿನ ಸಮಸ್ಯೆಗಳು ಇದನ್ನು ಇನ್ನಷ್ಟು ಸಂಕೀರ್ಣಗೊಳಿಸಿದವು. ಆದರೂ ಕ್ರಾಂತಿಕಾರಿ ಭೂಸುಧಾರಣೆ ಸರ್ಕಾರದ ಮೊದಲ ಕೆಲಸವಾಗಿತ್ತು.

ಪಕ್ಷದ ನಾಯಕರಿಗೆ ಸಾಕಷ್ಟು ಆಡಳಿತಾತ್ಮಕ ಆರ್ಥಿಕ ಸಾಂಸ್ಕೃತಿಕ ಬೆಳವಣಿಗೆ ನಿರ್ದೇಶಿಸುವ ಅನುಭವವಿರಲಿಲ್ಲ. ಪಕ್ಷದಲ್ಲಿ ಜನತಾಂತ್ರಿಕ ಕೇಂದ್ರವಾದ ಮತ್ತು ಸಾಮೂಹಿಕ ನಾಯಕತ್ವದ ಗಟ್ಟಿ ಸಂಪ್ರದಾಯಗಳು ಇನ್ನೂ ರೂಪಿತವಾದಿರಲಿಲ್ಲ. ಇದರಿಂದಾಗಿ 1967ರಲ್ಲಿ ಒಂದು ಬಾರಿ ಪಕ್ಷ ಇಭ್ಭಾಗವಾದಿದ್ದು, ದಮನದ ಒತ್ತಡದಿಂದಾಗಿ ಮತ್ತು ಪಕ್ಷದ ಪ್ರಯತ್ನದಿಂದಾಗಿ 1977 ರಲ್ಲಿ ಒಂದಾದಿತ್ತು. ಆದರೆ ಇನ್ನೂ ಎರಡು ಬಣ್ಣಗಳಲ್ಲಿ ಪೂರ್ಣ ಸೈದ್ಧಾಂತಿಕ, ಸಂಘಟನಾ ಐಕ್ಯತೆ ಇರಲಿಲ್ಲ. ವಿಶೇಷವಾಗಿ ಹಫೀಜಾ ಅಮೀನ್ ಬಗ್ಗೆ ಪಕ್ಷ ವಿಚಾರಣೆ ನಡೆಸಿ ಕೇಂದ್ರ ಸಮಿತಿಯಿಂದ ತೆಗೆಯುವ ನಿರ್ಧಾರ ಮಾಡಿತ್ತು. ಆದರೆ ಕ್ರಾಂತಿಯ ನಂತರ ಇದನ್ನು ಜಾರಿಗೆ ತರಲಿಲ್ಲ. ಕ್ರಮೇಣ ಅಮೀನ್ ಪಕ್ಷ ಮತ್ತು ಸರ್ಕಾರದಲ್ಲಿ ಬಲಗೊಂಡು ಇದು ಹಲವು ತಪ್ಪು ನೀತಿಗಳು ಮತ್ತು ಪ್ರಮಾದಗಳಿಗೆ ಕಾರಣವಾಯಿತು.) 1979ರಲ್ಲಿ ಅಧ್ಯಕ್ಷ ತರಾಕಿ ಕೊಲೆಗೈದು, ಅಮೀನ್ ಅಧಿಕಾರ ವಹಿಸಿಕೊಂಡ. ಪಕ್ಷದೊಳಗಿನ ಗುಂಪುಗಾರಿಕೆಯಿಂದ ಅಮೀನ್ ಹಲವಾರು (ಅದರದಲ್ಲೂ ಪಕ್ಷ, ಸರ್ಕಾರ ಮತ್ತು ಸೈನ್ಯದಲ್ಲಿ ಪ್ರಮುಖ ಹುದ್ದೆಗಳಲ್ಲಿದ್ದ ಜವಾಬ್ದಾರಿಯುತ ನಿಪುಣ) ಸದಸ್ಯರನ್ನು ತೆಗೆದು ಹಾಕಿದ, ಕ್ರಾಂತಿಯ ಹಂತವನ್ನು ಗಮನಿಸದೆ, ಜನರ ಧಾರ್ಮಿಕ ನಂಬಿಕೆಗಳು, ಸಂಪ್ರದಾಯಗಳು ಜೀವನಕ್ರಮವನ್ನು ನಿರ್ಲಕ್ಷಿಸಿ ಸಾಮಾಜಿಕ ಆರ್ಥಿಕ ಸುಧಾರಣೆಗಳನ್ನು ಕಾರ್ಯಗತ ಮಾಡಲು ಹೊರಟದ್ದು ಕ್ರಾಂತಿ ಮತ್ತು ಜನರ ಮಧ್ಯೆ ಕಂದಕ ಸೃಷ್ಟಿಸಿತು. ಅಮೀನ್ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಹಂತವನ್ನು ಬದಿಗೊತ್ತಿ ನೇರವಾಗಿ ಸಮಾಜವಾದಿ ಕ್ರಾಂತಿಗೆ ಹೋಗುವ ಅರ್ಥವಿಲ್ಲದ ಘೋಷಣೆಗಳನ್ನು ಹೊರಡಿಸಿದ. 15 ಸಾವಿರ ಪಕ್ಷದ ಸದಸ್ಯರು ಬಂಧನಕ್ಕೊಳಗಾಗಿರುವ ಸಂದರ್ಭದಲ್ಲಿ ಇಂತಹ ರಾಜಕೀಯ ತಪ್ಪುಗಳು ಜನರನ್ನು ಕ್ರಾಂತಿಯಿಂದ ವಿಮುಖ ಮಾಡಿದವು. ವಿಶೇಷವಾಗಿ ಧರ್ಮದ ಬಗ್ಗೆ

(6ನೇ ಪುಟ ನೋಡಿ)

ಅಫ್‌ಘಾನಿಸ್ತಾನಕ್ಕೆ ಸೋವಿಯೆತ್ ಪಡೆಗಳ ಪ್ರವೇಶದ ಬಗ್ಗೆ ಕಾ॥ಸುರ್‌ಜೀತ್

- "ನಾವು ಅಫ್‌ಘಾನಿಸ್ತಾನ್ ಪರಿಸ್ಥಿತಿಯನ್ನು ಈ ಕಾಲಘಟ್ಟದಲ್ಲಿ ಎರಡು ವಿಭಿನ್ನ ಸಾಮಾಜಿಕ ವ್ಯವಸ್ಥೆಗಳ ನಡುವಣ ಹೋರಾಟ ಹಾಗೂ ಸಾಮ್ರಾಜ್ಯಶಾಹಿ–ಪ್ರತಿಗಾಮಿ ಶಕ್ತಿಗಳ ವಿರುದ್ಧ ರಾಷ್ಟ್ರೀಯ ವಿಮೋಚನಾ ಹೋರಾಟಗಳ ಚೌಕಟ್ಟಿನಲ್ಲಿ ನೋಡಬೇಕು."
- "ಪ್ರತಿ-ಕ್ರಾಂತಿಯ ವಿರುದ್ಧ ಹೋರಾಟಕ್ಕೆ ಸೋವಿಯತ್ ಸೈನ್ಯದ ಪ್ರವೇಶ ವಿಶ್ವ ಶಾಂತಿ ಸಂಧಾನಕ್ಕೆ ವಿರುದ್ಧವಾದುದು ಎಂದು ಕೆಲವರು ವಾದಿಸುತ್ತಾರೆ. ಮಾರ್ಕ್ಸ್‌ವಾದಿಗಳು ವಿಶ್ವಶಾಂತಿ ಸಂಧಾನವೆಂದರೆ ರಾಷ್ಟ್ರೀಯ ವಿಮೋಚನಾ ಹೋರಾಟಗಳನ್ನು ನಿಲ್ಲಿಸುವುದು ಮತ್ತು ಅವುಗಳಿಗೆ ಮಿಲಿಟರಿ ಸಹಾಯ ಸೇರಿದಂತೆ ಇತರ ಸಹಾಯಗಳನ್ನು ಕೈಬಿಡುವುದು ಎಂದು ತಿಳಿದಿಲ್ಲ. ಇದನ್ನು ವಿಯೆಟ್ನಾಂ, ಮೊಜಾಂಬಿಕ್ ಮತ್ತು ಅಂಗೋಲಾಗಳಲ್ಲಿ ಸ್ಪಷ್ಟಪಡಿಸಲಾದಿದೆ."
- "ಸೋವಿಯೆತ್ ಮಿಲಿಟರಿ ಸಹಾಯ ಇವತ್ತಿನ ವಿಶ್ವದಲ್ಲಿ ಅಗತ್ಯವಾಗಿರುವ ಶಾಂತಿಯುತ ಸಹಬಾಳ್ವೆಯ ನೀತಿಗೆ ವಿರುದ್ಧವಾದುದು ಎಂದು ಕೆಲವರು ಹೇಳುತ್ತಾರೆ. ನಮ್ಮ ಪಕ್ಷ ಶಾಂತಿಯುತ ಸಹಬಾಳ್ವೆಯ ಪರಿಷ್ಕರಣವಾದಿ ಅರ್ಥೈಸುವಿಕೆಯನ್ನು ಹಿಂದಿನಿಂದಲೂ ವಿರೋಧಿಸುತ್ತಾ ಬಂದಿದೆ. ನಾವು ಕ್ರಾಂತಿಯ ಆಮದನ್ನು ವಿರೋಧಿಸುತ್ತೇವೆ, ಆದರೆ ಶಾಂತಿಯುತ ಸಹಬಾಳ್ವೆಯ ಹೆಸರಿನಲ್ಲಿ ಪ್ರತಿ-ಕ್ರಾಂತಿಯನ್ನು ರಫ್ತು ಮಾಡುವುದನ್ನು ಅಷ್ಟೇ ಬಲವಾಗಿ ವಿರೋಧಿಸುತ್ತೇವೆ ಪ್ರತಿಗಾಮಿ.... ಶಕ್ತಿಗಳಿಂದ ಅಪಾಯಕ್ಕೊಳಗಾದಿರುವ ಕ್ರಾಂತಿಯ ಗೆಲುವುಗಳನ್ನು ರಕ್ಷಿಸುವುದು ಇಂದು ಅಫ್‌ಘಾನಿಸ್ತಾನದ ಸಮಸ್ಯೆ."
- ಸೋವಿಯೆತ್ ಒಕ್ಕೂಟ ಯಾವ ದೇಶದ ಮೇಲೂ ಸಾಮಾಜಿಕ ಬದಲಾವಣೆಯನ್ನು ಹೇರುವುದಿಲ್ಲ. ಆದರೆ ಸ್ವಾಭಾವಿಕ ಚಾರಿತ್ರಿಕ ಪ್ರಕ್ರಿಯೆಗೊಳಗಾದಿ ಒಂದು ದೇಶದ ಜನರು ಸಾಮಾಜಿಕ ಬದಲಾವಣೆಗಳನ್ನು ತಂದಾಗ, ಅದನ್ನು ರಕ್ಷಿಸುವುದು ಸೋವಿಯೆತ್ ಒಕ್ಕೂಟದ ಕರ್ತವ್ಯ. ಈ ಕರ್ತವ್ಯವನ್ನು ಮಾಡದಿದ್ದರೆ ಸೋವಿಯೆತ್ ಒಕ್ಕೂಟದ ಅಂತರರಾಷ್ಟ್ರೀಯ ಕರ್ತವ್ಯದಲ್ಲಿ ಚ್ಯುತಿಯಾದಂತೆ."

(ಕಾ॥ ಸುರಜೀತ್ ರವರ ಪುಸ್ತಿಕೆಯೊಂದರಿಂದ)

ಹೊರಗಿನ ಹಸ್ತಕ್ಷೇಪ ನಿಂತ ಮೇಲೆ ಪರಿಶುದ್ಧ ಮನಸ್ಸಿನಿಂದ, ನಮ್ಮ ಕರ್ತವ್ಯ ನೆರವೇರಿಸಿದ ತೃಪ್ತಿಯೊಂದಿಗೆ ನಾವು ಅಫ್‌ಘಾನಿಸ್ತಾನದಿಂದ ಮರಳುತ್ತೇವೆ.

—ಜಿನೀವಾ ಮಾತುಕತೆಗಳು ನಡೆಯುತ್ತಿದ್ದಾಗ ಸೋವಿಯೆತ್ ವಿದೇಶಾಂಗ ಮಂತ್ರಿ ಶೆವರ್ಡ್‌ನಾಡ್ಜೆ

ಆಫ್‌ಘಾನರಿಗೆ ಶಾಂತಿ, ಐಕ್ಯತೆ ತರಬಲ್ಲ ಜಿನೇವಾ ಒಪ್ಪಂದ

ಕಳೆದ ತಿಂಗಳು ಜಿನೇವಾದಲ್ಲಿ ವಿಶ್ವಸಂಸ್ಥೆಯ ಆಶ್ರಯದಲ್ಲಿ ನಡೆದ ಜಿನೇವಾ ಒಪ್ಪಂದ ಈ ವರ್ಷದ ಅತ್ಯಂತ ಮಹತ್ವಪೂರ್ಣ ಘಟನೆ 1978ರ ಏಪ್ರಿಲ್ ಕ್ರಾಂತಿ ಆಫ್‌ಘಾನ್ ರೈತನಿಗೆ ಭೂಮಿ ನೀಡಿತು. 1988 ಏಪ್ರಿಲ್ ಒಪ್ಪಂದ ಆಫ್‌ಘಾನ್ ಜನತೆಗೆ ಬಹು ಅವಶ್ಯಕವಾದ ಶಾಂತಿ, ಐಕ್ಯತೆಗೆ ನಾಂದಿಯಾಗಲಿದೆ. ಈ ಐತಿಹಾಸಿಕ ಒಪ್ಪಂದದ ಮತ್ತು "ಆಫ್‌ಘಾನ್ ಸಮಸ್ಯೆ"ಯ ಸ್ಥೂಲ ಪರಿಚಯ ಈ ಎರಡು ಲೇಖನಗಳು.

ಏಪ್ರಿಲ್ 14, 1988. ಜಿನೇವಾದಲ್ಲಿ ವಿಶ್ವಸಂಸ್ಥೆಯ ಭವನ 'ಪ್ಯಾಲೇ ದೆ ನೇಶನ್ಸ್'ನಲ್ಲಿ ನಡೆದ 17ನಿಮಿಷಗಳ ಸಮಾರಂಭದಲ್ಲಿ ಆಫ್‌ಘಾನಿಸ್ತಾನ, ಪಾಕಿಸ್ತಾನ, ಸೋವಿಯೆತ್ ಒಕ್ಕೂಟ ಮತ್ತು ಅಮೆರಿಕಾದ ವಿದೇಶಾಂಗ ಮಂತ್ರಿಗಳು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರ ಸಮ್ಮುಖದಲ್ಲಿ 36ಪುಟಗಳ ಒಂದು ದಾಸ್ತಾವೇಜಿಗೆ ಸಹಿ ಹಾಕಿದರು. ಇದೇ "ಆಫ್‌ಘಾನ್ ಒಪ್ಪಂದ" ಎಂದು ಈಗ ಹೆಸರಾಗಿರುವ, ಬಹಳ ದಿನಗಳಿಂದ ವಿಶ್ವದ ಶಾಂತಿಪ್ರಿಯ ಜನತೆ, ವಿಶೇಷವಾಗಿ ಭಿಷ್ಯಾದ ಜನತೆ ಕಾತುರದಿಂದ ನಿರೀಕ್ಷಿಸುತ್ತಿದ್ದ, ಪಾಕಿಸ್ತಾನದ ಮಿಲಿಟರಿ ಶಾಹಿಗಳು ಮತ್ತು ಅವರ ಅಮೆರಿಕನ್ ಸಾಮ್ರಾಜ್ಯಶಾಹೀ ಗುರುಗಳು ಕೊನೆಗಳಿಗೆಯಲ್ಲಿ ಮತ್ತೊಮ್ಮೆ ಅತಂಕವೊಡ್ಡಿರದಿದ್ದರೆ, ಮಾರ್ಚ್ 15ರೊಳಗೇ ಆಗಬೇಕಾಗಿದ್ದ ಒಪ್ಪಂದ.

ಈ ಚಾರಿತ್ರಿಕ ದಸ್ತಾವೇಜ್‌ನಲ್ಲಿ "ಆಫ್‌ಘಾನ್ ಸಮಸ್ಯೆ"ಯ ಪರಿಹಾರ ಕುರಿತಾದ ಹಲವಾರು ಒಪ್ಪಂದಗಳಿವೆ. ಅವುಗಳಲ್ಲೊಂದಾದ ಆಫ್‌ಘಾನಿಸ್ತಾನ ಗಣತಂತ್ರ ಮತ್ತು ಪಾಕಿಸ್ತಾನ ಇಸ್ಲಾಮಿಕ್ ಗಣತಂತ್ರದ ಪ್ರತಿನಿಧಿಗಳು ಸಹಿ ಹಾಕಿದ ದ್ವಿಪಕ್ಷೀಯ ಒಪ್ಪಂದದ ಪ್ರಮುಖ ಅಂಶಗಳು ಹೀಗಿವೆ:

1, ಪರಸ್ಪರ ದೇಶಗಳ ಸಾರ್ವಭೌಮತೆ, ರಾಜಕೀಯ ಸ್ವಾತಂತ್ರ್ಯ, ಪ್ರಾದೇಶಿಕ ಸಮಗ್ರತೆ, ರಾಷ್ಟ್ರೀಯ ಐಕ್ಯತೆ, ಭದ್ರತೆ ಮತ್ತು ಅಲಿಪ್ತತೆಯನ್ನು ಗೌರವಿಸಬೇಕು,

2, ಪರಸ್ಪರ ಸಾಮಾಜಿಕ, ರಾಜಕೀಯ ಅಥವಾ ಆರ್ಥಿಕ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಲು ಯಾವುದೇ ಬೆದರಿಕೆ, ಬಲಪ್ರಯೋಗ ಅಥವಾ ಇತರ ವಿಧಾನಗಳಿಂದ ಗಡಿ ಉಲ್ಲಂಘನೆ ಮಾಡಬಾರದು,

3. ಇನ್ನೊಂದು ದೇಶದ ಸಾರ್ವಭೌಮತೆ, ರಾಷ್ಟ್ರೀಯ ಸ್ವಾತಂತ್ರ್ಯ, ಪ್ರಾದೇಶಿಕ ಸಮಗ್ರತೆ ಮತ್ತು ರಾಷ್ಟ್ರೀಯ ಐಕ್ಯತೆಯನ್ನು ಯಾವುದೇ ವಿಧಾನದಲ್ಲಿ ಉಲ್ಲಂಘಿಸಲು ತನ್ನ ಪ್ರದೇಶವನ್ನು ಬಳಸದಂತೆ ನೋಡಿಕೊಳ್ಳಬೇಕು.

4. ಸಶಸ್ತ್ರ ಮಧ್ಯಪ್ರವೇಶ, ಬುಡಮೇಲು ಚಟುವಟಿಕೆ ಅಥವಾ ಮಿಲಿಟರಿ ಆಕ್ರಮಣ ನಡೆಸಬಾರದು.

5. ಇನ್ನೊಂದು ದೇಶದ ವಿರುದ್ಧ ಚಟುವಟಿಕೆಗಳಿಗೆ ಕೂಲಿಸೈನಿಕರ ತರಬೇತಿ, ಶಸ್ತ್ರಪೂರೈಕೆ, ಹಣಕಾಸು ನೆರವು ಮತ್ತು ಭರ್ತಿಯನ್ನು ನಡೆಸಲು ತನ್ನ ಪ್ರದೇಶವನ್ನು ಬಳಸದಂತೆ ತಡೆಯಬೇಕು.

6. ಹೆಸರು ಕೆಡಿಸುವ, ವೈಷಮ್ಯಪೂರ್ಣ ಅಪಪ್ರಚಾರ ನಡೆಸಬಾರದು.

ಇನ್ನೊಂದು ಒಪ್ಪಂದದಲ್ಲಿ ಪಾಕಿಸ್ತಾನ ಮತ್ತು ಇರಾನ್‌ನಲ್ಲಿರುವ ಆಫ್‌ಘಾನ್ ನಿರಾಶ್ರಿತರು ಸ್ವದೇಶಕ್ಕೆ ಮರಳಿ ಇತರ ಆಫ್‌ಘಾನ್ ನಾಗರಿಕರಂತೆ ಸಮಾನ ಹಕ್ಕುಗಳನ್ನು ಪಡೆದು ನೆಲೆಸಲು ಅವಕಾಶ ಮಾಡಿಕೊಡಲಾಗಿದೆ.

ಈ ಒಪ್ಪಂದಗಳ ಉಲ್ಲಂಘನೆಯಾದಲ್ಲಿ ಅದನ್ನು ಚರ್ಚಿಸಲು ಅಗತ್ಯವಾದಾಗಲೆಲ್ಲ ಆಫ್‌ಘಾನಿಸ್ತಾನ ಮತ್ತು ಪಾಕಿಸ್ತಾನದ ಪ್ರತಿನಿಧಿಗಳು ಸಭೆ ಸೇರಬೇಕು ಮತ್ತು ಇಂತಹ ಉಲ್ಲಂಘನೆಗಳ ಬಗ್ಗೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರ ಪ್ರತಿನಿಧಿಯೊಬ್ಬರು ತನಿಖೆ ನಡೆಸುತ್ತಾರೆಂದೂ ಒಪ್ಪಂದದಲ್ಲಿ ಹೇಳಲಾಗಿದೆ,

ಆಫ್‌ಘಾನಿಸ್ತಾನದ ರಾಜಧಾನಿ ಕಾಬೂಲ್ ಮತ್ತು ಪಾಕಿಸ್ತಾನದ ರಾಜಧಾನಿ ಇಸ್ಲಾಮಾಬಾದ್‌ನಲ್ಲಿ ಎರಡು ಪ್ರತ್ಯೇಕ ಘಟಕಗಳ ಮುಖ್ಯಸ್ಥನಾದಿ ಒಬ್ಬ ಹಿರಿಯ ಮಿಲಿಟರಿ ಅಧಿಕಾರಿಯನ್ನು ಈ ಪ್ರದೇಶದಲ್ಲಿ ನೇಮಿಸಲು ಕೂಡಾ ವಿಶ್ವಸಂಸ್ಥೆಗೆ ಅವಕಾಶ ಕಲ್ಪಿಸಲಾಗಿದೆ.

ಸೋವಿಯೆತ್ ಒಕ್ಕೂಟ ಮತ್ತು ಅಮೆರಿಕಾದ ಪ್ರತಿನಿಧಿಗಳು ಸಹಿ ಹಾಕಿದ ಒಪ್ಪಂದದಲ್ಲಿ ಪಾಕಿಸ್ತಾನ ಮತ್ತು ಆಫ್‌ಘಾನಿಸ್ತಾನ ಮಾಡಿಕೊಂಡ ಇತ್ಯರ್ಥಕ್ಕೆ ತಮ್ಮ ಬೆಂಬಲ ಹಾಗೂ ಬದ್ಧತೆ ವ್ಯಕ್ತಪಡಿಸಿ ಈ ಎರಡು ದೇಶಗಳ ಆಂತರಿಕ ವ್ಯವಹಾರಗಳಲ್ಲಿ ತಾವು ಕೈಹಾಕುವುದಿಲ್ಲ ಎಂಬ ಭರವಸೆ ನೀಡಿದ್ದಾರೆ. ಅಲ್ಲದೆ ಸೋವಿಯೆತ್ ಸೇನಾಪಡೆಗಳು ಮೇ 15ರಿಂದ ಹಂತ-ಹಂತವಾಗಿ "ಆಗಸ್ಟ್ 15, 1988 ರೊಳಗೆ ಅರ್ಧದಷ್ಟು ಹಾಗೂ ಎಲ್ಲಾ ಪಡೆಗಳು ಒಂಬತ್ತು ತಿಂಗಳೊಳಗೆ" ನಿರ್ಗಮಿಸುತ್ತವೆಯೆಂದು ಒಪ್ಪಂದ ಹೇಳುತ್ತದೆ.

ಹೀಗೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳ ವಿಶೇಷ ರಾಯಭಾರಿಗಳ ಮಧ್ಯಸ್ಥಿಕೆಯಲ್ಲಿ ಕಳೆದ ಆರು ವರ್ಷಗಳಿಂದ ನಡೆಯುತ್ತಿದ್ದ ಮಾತುಕತೆ ಕೊನೆಗೂ ಫಲಪ್ರದವಾಗಿರುವಂತೆ ಕಾಣುತ್ತದೆ. ಇದನ್ನು ಪಾಕಿಸ್ತಾನ ಮತ್ತು ಅಮೆರಿಕಾ ಪ್ರಾಮಾಣಿಕವಾಗಿ ಜಾರಿ ಮಾಡುತ್ತವೆಯೋ ಎಂಬುದನ್ನು ಕಾದುನೋಡಬೇಕು. ಇಲ್ಲಿ ಸಂಶಯಕ್ಕೆ ಎರಡು ಕಾರಣಗಳಿವೆ. ಮೊದಲನೆಯದಾಗಿ ಈ ಮಾತುಕತೆಗಳು ಇಷ್ಟೊಂದು ನಿಧಾನಗತಿಯಲ್ಲಿ ಸಾಗಲು ಪಾಕಿಸ್ತಾನದ ನಿಲುವಿನಲ್ಲಿ ಬದಲಾವಣೆಗಳಾಗುತ್ತಿದ್ದುದೇ ಕಾರಣ. ಪ್ರತಿಬಾರಿಯೂ ಒಪ್ಪಂದ ಇನ್ನೇನು ಸನ್ನಿಹಿತವಾಗಿದೆ ಎನ್ನುವಾಗಲೆಲ್ಲಾ ಪಾಕಿಸ್ತಾನ ಹೊಸ ಶರತ್ತುಗಳನ್ನು ಒಡ್ಡುತ್ತಾ ಬಂದಿತ್ತು.

ಮಾತುಕತೆಗಳು ತ್ವರಿತಗತಿಯಲ್ಲಿ, ಯಶಸ್ವಿಯಾಗಿ ಮುಗಿಯಲೆಂಬ ಸದುದ್ದೇಶದಿಂದ ಆಫ್‌ಘಾನಿಸ್ತಾನ ಮತ್ತು ಸೋವಿಯೆತ್ ಒಕ್ಕೂಟ ಪರಸ್ಪರ ಚರ್ಚಿಸಿ ಮಾರ್ಚ್ 15ರೊಳಗೆ ಪಾಕಿಸ್ತಾನ ಮತ್ತು ಆಫ್‌ಘಾನಿಸ್ತಾನ ನಡುವೆ ಒಪ್ಪಂದ ನಡೆದಲ್ಲಿ ಸೋವಿಯೆತ್ ಪಡೆಗಳು ಮೇ 15ರಿಂದ ಆರಂಭಿಸಿ ಹತ್ತು ತಿಂಗಳೊಳಗೆ ನಿರ್ಗಮಿಸುತ್ತವೆ ಎಂದು ನಿರ್ದಿಷ್ಟ ದಿನಾಂಕ ನೀಡಿದ ಮೇಲೂ ಪಾಕಿಸ್ತಾನ ಹೊಸ ಹೊಸ ಅಡ್ಡಿ ಆತಂಕಗಳನ್ನು ಒಡ್ಡುವುದನ್ನು ನಿಲ್ಲಿಸಲಿಲ್ಲ.

ಮಾರ್ಚ್ 2ರಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರ ವಿಶೇಷ ರಾಯಭಾರಿ ಡಿಯಾಗೋ ಕೋರ್ಡೋವೆಝರ ಮಧ್ಯಸ್ಥಿಕೆಯಲ್ಲಿ ಸಾಕಷ್ಟು ಪೂರ್ವಭಾವಿ ಸಿದ್ಧತೆಗಳ ನಂತರ ಆರಂಭವಾದ ಕೊನೆಯ ಸುತ್ತಿನ ಮಾತುಕತೆಗಳಲ್ಲಿ ಇನ್ನೇನು ಮಾರ್ಚ್ 15ರೊಳಗೆ ಇತ್ಯರ್ಥ ನಡೆಯುತ್ತದೆ. ಎಂದಿದ್ದಾಗ ಪಾಕಿಸ್ತಾನ ಹೊಸ ಶರತ್ತು ಮಂಡಿಸಿತು. ಜಿನೇವಾ ಒಪ್ಪಂದಕ್ಕೆ ಸಹಿ ಹಾಕುವ ಮೊದಲು ಅಫ್‌ಘಾನಿಸ್ತಾನದಲ್ಲಿ ಒಂದು ಮಧ್ಯಂತರ ಸಮ್ಮಿಶ್ರ ಸರಕಾರ ರಚನೆಯಾಗಬೇಕು ಮತ್ತು ಆಫ್‌ಘಾನ್ ಬಂಡುಕೋರರಿಗೆ ನೆರವಿನ ನಿಲುಗಡೆಯೊಂದಿಗೆ ಆಫ್‌ಘಾನಿಸ್ತಾನಕ್ಕೆ ಸೋವಿಯೆತ್ ಮಿಲಿಟರಿ ನೆರವು ನಿಲ್ಲಬೇಕು ಎಂದು ಅದು ಒತ್ತಾಯ ಮಾಡಲಾರಂಭಿಸಿತು,

ಸಮ್ಮಿಶ್ರ ಸರ್ಕಾರದ ರಚನೆ ಆಫ್‌ಘಾನಿಸ್ತಾನದ ಆಂತರಿಕ ವ್ಯವಹಾರ. ಅದನ್ನು ವಾಷಿಂಗ್ಟನ್, ಮಾಸ್ಕೋ ಅಥವಾ ಜಿನೇವಾದಲ್ಲಿ ನಿರ್ಧರಿಸಲು ಸಾಧ್ಯವಿಲ್ಲ; ಆಫ್‌ಘಾನಿಸಾನ್ತಕ್ಕೆ ಸೋವಿಯೆತ್ ನೆರವು ಎರಡು ಸಾರ್ವಭೌಮ ದೇಶಗಳ ನಡುವಿನ ಒಪ್ಪಂದದ ಅಂಶ, ಅದನ್ನು ಬಂಡುಕೋರ ಭಯೋತ್ಪಾದಕರಿಗೆ ಅಮೆರಿಕನ್ ನೆರವಿನೊಂದಿಗೆ ಹೋಲಿಸಲು ಸಾಧ್ಯವಿಲ್ಲ ಎಂದು ಆಫ್‌ಘಾನಿಸ್ತಾನ ದೃಢ ನಿಲುವು ತಳೆದ ಮೇಲೆ ನಿರ್ವಾಹವಿಲ್ಲದೆ ಪಾಕಿಸ್ತಾನ ಒಪ್ಪಬೇಕಾಯಿತು.

ಒಪ್ಪಂದದ ಪ್ರಾಮಾಣಿಕ ಅನುಷ್ಠಾನದ ಬಗ್ಗೆ ಸಂಶಯ ಮೂಡಿಸುವ ಇನ್ನೊಂದು ಅಂಶವೆಂದರೆ ಒಪ್ಪಂದದ ನಂತರ ಇಸ್ಲಾಮಾಬಾದ್ ಮತ್ತು ವಾಷಿಂಗ್ಟನ್‌ನಲ್ಲಿ ಕಂಡುಬಂದ ಪ್ರತಿಕ್ರಿಯೆ, ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರು ಇದೊಂದು ಅತ್ಯಂತ ಮಹತ್ವಪೂರ್ಣ ಸಾಧನೆ" ಎಂದೂ, ಸೋವಿಯೆತ್ ಮುಖಂಡ ಐ.ಎನ್.ಎಫ್. ಸಂಧಿಯಷ್ಟೇ ಮಹತ್ವದ ಒಪ್ಪಂದವಿದು ಎಂದಿದ್ದರೆ, ಒಪ್ಪಂದದಲ್ಲಿನ ತನ್ನ ಬದ್ಧತೆಗಳನ್ನು ಬದಿಗೊತ್ತಿ ಅಧ್ಯಕ್ಷ ರೇಗನ್ ಬಂಡುಕೋರ ದುಶ್ಮನ್‌ಗಳಿಗೆ ನೆರವು ಮುಂದುವರಿಸುವುದಾಗಿ ಒತ್ತಿ-ಒತ್ತಿ ಹೇಳುತ್ತಿದ್ದರೆ; ಸೋವಿಯೆತ್ ಪಡೆಗಳ ವಾಪಸಾತಿಯೊಂದಿಗೆ ಅಫ್‌ಘಾನಿಸ್ತಾನಿನಲ್ಲಿ ಅಲ್ಲೋಲ ಕಲ್ಲೋಲವಾಗಲಿದೆ ಎಂದು ಝಿಯಾ-ಉಲ್-ಹಕ್‌ಹೇಳಿದ್ದಾರೆ, ಪಾಕಿಸ್ತಾನದಲ್ಲಿರುವ ಏಳು ಆಫ್‌ಘಾನ್ ಮೂಲಭೂತವಾದೀ ಪಕ್ಷಗಳ ಕೂಟ ಈ ಒಪ್ಪಂದವನ್ನು ತಿರಸ್ಕರಿಸಿದೆ ಮಾತ್ರವೇ ಅಲ್ಲ ಒಪ್ಪಂದವಾದ ಮರುದಿನವೇ ಪಾಕಿಸ್ತಾನ ಗಡಿಯಿಂದ ಆಫ್‌ಘಾನೀ ಪಡೆಗಳ ಮೇಲೆ ಹಲ್ಲೆ ನಡೆಸಿದೆ ಎಂಬ ಹಿನ್ನೆಲೆಯಲ್ಲಿ ಪಾಕಿಸ್ತಾನ ಮತ್ತು ಅಮೆರಿಕನ್ ಮುಖಂಡರ ಈ ಪ್ರತಿಕ್ರಿಯೆಯನ್ನು ಗಮನಿಸಬೇಕು.

ಈ ಒಪ್ಪಂದವನ್ನು ಸ್ವಾಗತಿಸಿರುವ ಪಾಕಿಸ್ತಾನದ ಪ್ರಮುಖ ವಿರೋಧ ಪಕ್ಷವಾದ ಅವಾಮೀ ಪಕ್ಷದ ಮುಖಂಡರು ಕೂಡಾ ಈ ಸಂದೇಹವನ್ನು ವ್ಯಕ್ತಪಡಿಸಿದ್ದಾರೆ.

ಆದರೂ ಅಧ್ಯಕ್ಷ ನಜೀಬುಲ್ಲಾರವರ ನೇತೃತ್ವದಲ್ಲಿ ರಾಷ್ಟ್ರೀಯ ಹೊಂದಾಣಿಕೆಯ ನೀತಿಗೆ ಕಳೆದ ಒಂದು ವರ್ಷದಲ್ಲಿ ದೊರೆತ ಯಶಸ್ಸು ಹಾಗೂ ಅದು ಗಳಿಸಿದ ಜನಪ್ರಿಯತೆಯ ಹಿನ್ನೆಲೆಯಲ್ಲಿ ಮತ್ತು ಜಾಗತಿಕ ಸಾರ್ವಜನಿಕಾಭಿಪ್ರಾಯದ ಪೂರ್ಣಬೆಂಬಲದೊಂದಿಗೆ, ವಿಶೇಷವಾಗಿ ಪಾಕಿಸ್ತಾನೀ ಜನತೆಯ ಬೆಂಬಲದೊಂದಿಗೆ ಆಫ್‌ಘಾನ್ ಜನತೆ ಈ ಒಪ್ಪಂದದ ಪ್ರಾಮಾಣಿಕ ಅನುಷ್ಠಾನವಾಗುವಂತೆ ನೋಡಿಕೊಳ್ಳುತ್ತಾರೆ ಎಂಬುದೂ ಖಂಡಿತ. ಮೂಲಭೂತವಾದಿಗಳಲ್ಲದ ವಿರೋಧಿ ಗುಂಪುಗಳು, ನಜೀಬುಲ್ಲಾರ ರಾಷ್ಟ್ರೀಯ ಹೊಂದಾಣಿಕೆಯನ್ನು ಬೆಂಬಲಿಸಿ, ಈಗ ಈ ಒಪ್ಪಂದವನ್ನು ಸ್ವಾಗತಿಸಿರುವುದು "ಆಫ್‌ಘಾನ್‌ಸಮಸ್ಯೆ"ಯ ಪರಿಹಾರಕ್ಕೆ ನೆರವಾಗುವ ಇನ್ನೊಂದು ಸಂಗತಿ.

ಒಬ್ಬ ಆಫ್‌ಘಾನ್ ಮುಖಂಡ ಹೇಳಿರುವಂತೆ 1978ರ ಏಪ್ರಿಲ್ ಕ್ರಾಂತಿ ಆಫ್‌ಘಾನ್ ರೈತನಿಗೆ ಭೂಮಿ ಕೊಟ್ಟಿತು. 1988ರ ಏಪ್ರಿಲ್‌ನಲ್ಲಾದ ಒಪ್ಪಂದ ಆಫ್‌ಘಾನ್ ಜನತೆಗೆ ಅತೀ ಅವಶ್ಯವಾದ ಶಾಂತಿ ಒದಗಿಸುತ್ತದೆ,

---

ಝಿಯಾ ನಮ್ಮನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ; ಪ್ರತಿಗಾಮೀ ಸರ್ಕಾರಗಳಿಂದ ಹಣ ಪಡೆದು ಅದನ್ನು ತನಗಾಗಿ ಬಳಸಿಕೊಳ್ಳುತ್ತಿದ್ದಾರೆ ಎಂಬುದನ್ನು ನಾವು ನೋಡಿದೆವು....50ಲಕ್ಷ ನಿರಾಶ್ರಿತರು ತಾಯ್ನಾಡಿಗೆ ಮರಳಲು ಸಿದ್ಧರಿದ್ದಾರೆ. ಪಾಕಿಸ್ತಾನ ಶಾಂತಿಯ ಅವರ ಆಕಾಂಕ್ಷೆಯನ್ನು ಅರಿತು ವಿಶ್ವಸಂಸ್ಥೆಯೊಂದಿಗೆ ಸಹಕರಿಸಬೇಕು.

—ಹಾಜೀ ಘೌಸುದ್ದೀನ್

(ನವದೆಹಲಿಯಿಂದ ಈಗ ತನ್ನ ಬೆಂಬಲಿಗರೊಂದಿಗೆ ತಾಯ್ನಾಡಿಗೆ ಮರಳಿರುವ ಮೂರು ಆಫ್‌ಘಾನ್ ಪಕ್ಷಗಳ ಕೂಟದ ಕೋಶಾಧಿಕಾರಿ.)

ಶಾಂತಿಯ ಆಕಾಂಕ್ಷೆ

ಇದ್ದಕ್ಕಿದ್ದಂತೆ ಪಾಕಿಸ್ತಾನದಲ್ಲಿದ್ದ ಆಫ್‌ಘಾನ್ ನಿರಾಶ್ರಿತರು ತಮ್ಮಲ್ಲಿರುವ ಡಾಲರುಗಳನ್ನು ಅಥವಾ ಪಾಕಿಸ್ತಾನೀ ರೂಪಾಯಿಗಳನ್ನು ಆಫ್‌ಘಾನ್ ನಾಣ್ಯಕ್ಕೆ ಬದಲಿಸಲು ಧಾವಿಸಿದರು. ಇದರ ಪರಿಣಾಮವಾಗಿ ನಿರಾಶ್ರಿತರಿದ್ದ ಪ್ರದೇಶದಲ್ಲಿ ಡಾಲರ್ ಬೆಲೆ ಮೂರೇ ದಿನಗಳಲ್ಲಿ 48 ಆಫ್‌ಘಾನಿಗಳಷ್ಟು ಇಳಿಯಿತು. ಶಾಂತಿಯ ಸ್ಥಾಪನೆ ಹಾಗೂ ಬೇಗನೇ ತಾಯ್ನಾಡಿಗೆ ಮರಳುವ ನಿರೀಕ್ಷೆಗೆ ಅವರ ತಕ್ಷಣದ ಪ್ರತಿಕ್ರಿಯೆಯಿದು. ಅವರ ಶಾಂತಿಯ ಬಯಕೆಯ ಪ್ರತೀಕ ಕೂಡಾ.

1987 ನವೆಂಬರ್‌ನಲ್ಲಿ ಲೋಯಾ ಜಿರ್ಗಾ (ರಾಷ್ಟ್ರೀಯ ವಿಧಾನಸಭೆ) ಅಂಗೀಕರಿಸಿದ ಆಫ್‌ಘಾನ್ ಗಣತಂತ್ರದ ಸಂವಿಧಾನ ಆಫ್‌ಘಾನಿಸ್ತಾನ ಒಂದು ಬಹು-ದೇಶೀಯ ಪ್ರಭುತ್ವ ಎಂದು ಘೋಷಿಸಿ ಎಲ್ಲಾ ಗುಂಪು ದೇಶೀ ಗುಂಪುಗಳಿಗೆ ಸಮಾನತೆಯ ಹಕ್ಕನ್ನು ಸಾರಿತು. ಇದರ ಸಾಧನೆಗೆ ಹೊಸ ರಾಜಕೀಯ ಮಾರ್ಗದರ್ಶನಗಳನ್ನು ಹಾಕಿಕೊಟ್ಟಿತು; ಬಹುಪಕ್ಷದ ರಾಜಕೀಯ ವ್ಯವಸ್ಥೆಯನ್ನೂ ಘೋಷಿಸಲಾಯಿತು, ಕಾರ್ಮಿಕ ಶಾಸನ ಕೆಲಸದ ಹಕ್ಕಿನ ಭರವಸೆ ನೀಡಿತು,

---

ಕಳೆದ ಹತ್ತು ವರ್ಷಗಳಲ್ಲಿ ಪಾಕಿಸ್ತಾನದಲ್ಲಿ ಯಾವುದೇ ದೊಡ್ಡ ಸೋವಿಯೆತ್-ವಿರೋಧಿ ಮತ ಪ್ರದರ್ಶನ ನಡೆದಿಲ್ಲ. ಅದೇ ಹೊತ್ತಿಗೆ ಅಮೆರಿಕಾದೊಂದಿಗಿನ ಸಂಬಂಧಗಳಲ್ಲಿ ಸೆಳೆತ ಕಂಡು ಬಂದಾಗಲೆಲ್ಲಾ ಪ್ರತಿಭಟನೆಗಳು, ತೀವ್ರ ಕೋಪದ ಪ್ರದರ್ಶನಗಳು ಕಂಡು ಬಂದಿವೆ. 1979ರಲ್ಲಿ ಅಮೆರಿಕನ್ ರಾಯಭಾರ ಕಚೇರಿಗೆ ಬೆಂಕಿ ಹಚ್ಚಲಾಯಿತು ಕೂಡಾ.

—ಮುಷಾಹಿದ್ ಹುಸೇನ್,
ಪಾಕಿಸ್ತಾನೀ ಪತ್ರಕರ್ತ

ಬಾಂಗ್ಲಾದೇಶ

ಇರ್ಷಾದನ ಹತಾಶ ಪ್ರಯತ್ನಗಳು

ಬಾಂಗ್ಲಾದೇಶ ತನ್ನ 17 ವರ್ಷಗಳ ಚರಿತ್ರೆಯಲ್ಲಿ ಈ ಹಿಂದೆ ಆಯ್ಕೆಗೊಂಡ ಮೂರು ಪಾರ್ಲಿಮೆಂಟುಗಳಲ್ಲಿ ಯಾವುದೂ ತನ್ನ ಪೂರ್ಣ ಅವಧಿಯನ್ನು ಮುಗಿಸಲಿಲ್ಲ. ಈಗ 4ನೇ ಪಾರ್ಲಿಮೆಂಟನ್ನು ಅದು ಕಾಣುತ್ತಿದೆ. ಯಾವುದೇ ದೃಷ್ಟಿಯಿಂದ ಇದು ಪ್ರತಿನಿಧಿಗಳ ಸಂಸ್ಥೆಯಾಗಿ ಈಗ ಉಳಿದಿಲ್ಲ.

ಮಾರ್ಚ್ 3ರಂದು ನಡೆದ "ಚುನಾವಣೆ" ಎಂದು ಕರೆಸಲ್ಪಟ್ಟ ಇರ್ಷಾದನ ನಾಟಕವನ್ನು ಬಾಂಗ್ಲಾದೇಶದ ಪ್ರಮುಖ ವಿರೋಧ ಪಕ್ಷಗಳ ಕರೆಯ ಮೇರೆಗೆ ಬಹುಪಾಲು ಜನತೆ ಬಹಿಷ್ಕರಿಸಿದ್ದರು. ಸಾಮಾನ್ಯ ಅಭಿಪ್ರಾಯದಂತೆ 9ಸಾವಿರ ಸೈನ್ಯ ಹಾಗೂ ರಕ್ಷಣಾ ಬಲದ 3ಲಕ್ಷ ಜನರನ್ನು ಜಮಾಯಿಸಲಾಗಿದ್ದರೂ ಜನ ಅದಕ್ಕೆ ಹೆದರಲಿಲ್ಲ, 10 ಶೇಕಡ ಜನರೂ ಮತದಾನ ಮಾಡಲಿಲ್ಲ.

ಘರ್ಷಣೆಯ ಪರಿಣಾಮವಾಗಿ 13 ಜನ ಸತ್ತು, 300 ಜನ ಗಾಯಗೊಂಡರು. ನಂತರ ಪ್ರಕಟವಾದ ಫಲಿತಾಂಶದಲ್ಲಿ ಇರ್ಷಾದನ ಜಾತೀಯ ಪಕ್ಷವು 3/4 ಬಹುಮತವನ್ನು ಕಪಟ ಪಾರ್ಲಿಮೆಂಟಿನಲ್ಲಿ ಪಡೆಯಿತು. ಈ ಕಾನೂನು ಬಾಹಿರವಾದ ಪಾರ್ಲಿಮೆಂಟ್ ತನ್ನ ಅಧಿವೇಶನ ಆರಂಭಿಸುವುದನ್ನು ವಿರೋಧಿಸಿ ಬಾಂಗ್ಲಾದೇಶದ 8 ಪಕ್ಷ 7ಪಕ್ಷ ಮತ್ತು 5 ಪಕ್ಷಗಳನ್ನೊಳಗೊಂಡ ಜಂಟಿ ಸಮಿತಿಯು ಏಪ್ರಿಲ್ 25ರಂದು ರಾಷ್ಟ್ರವ್ಯಾಪೀ ಹರತಾಳಕ್ಕೆ ಕರೆ ನೀಡಿತು.

ಆರು ವರ್ಷಗಳ ಹಿಂದೆ ಸೇನಾ ಕ್ರಾಂತಿಯ ಮೂಲಕ ಅಧಿಕಾರ ಕಿತ್ತುಕೊಂಡ ಇರ್ಷಾದ್ ವಿರುದ್ಧ ಬಾಂಗ್ಲಾದೇಶದ ಜನ ನಿರಂತರ ಹೋರಾಟ ಮುಂದುವರಿಸಿದ್ದಾರೆ. ನವೆಂಬರ್ 10 ರಂದು ದೇಶದ ರಾಜಧಾನಿ 'ಢಾಕ್ ವಶಪಡಿಸಿಕೊಳ್ಳುವ' ಕರೆ, 48, 72 ಗಂಟೆಗಳ ಬಂದ್ ಕರೆಗಳು ಇರ್ಷಾದ್ ಪ್ರಭುತ್ವಕ್ಕೆ ಸವಾಲಾದವು. ಅಧಿಕೃತ ವರದಿಯಂತೆ ಈ ಹೋರಾಟದಲ್ಲಿ 150ಜನ ಮೃತ ಪಟ್ಟಿದ್ದು, ಸಾವಿರಾರು ಜನ ಗಾಯಗೊಂಡರು, ನವೆಂಬರ್ ತಿಂಗಳೊಂದರಲ್ಲೆ 5 ಸಾವಿರ ಜನ ಬಂಧಿಸಲ್ಪಟ್ಟರು. ಭೀತನಾದ ಇರ್ಷಾದ್ ನವೆಂಬರ್ 27 ರಂದು ತುರ್ತುಪರಿಸ್ಥಿತಿ ಘೋಷಿಸಿದ, ಡಿಸೆಂಬರ್ 6ರಂದು ಪಾರ್ಲಿಮೆಂಟನ್ನು ಅವಸಾನಗೊಳಿಸಿದ. ಮಾರ್ಚ್ 3ರಂದು ಚುನಾವಣೆಗೆ ಆದೇಶ ನೀಡಲಾಯಿತು.

ಜನ ರೊಚ್ಚಿಗೆದ್ದರು. ಚಿತ್ರಗಾಂಗ್‌ನಲ್ಲಿ ಹೋರಾಟ ನಿರತ 24ಜನತೆ ಬಲಿಯಾದರು, ಫೆಬ್ರವರಿ 10ರಂದು ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆ ಸಂದರ್ಭದಲ್ಲಿ 200 ಜನ ಕೊಲ್ಲಲ್ಪಟ್ಟರು.

ಫೆಬ್ರವರಿ 21 ಬಾಂಗ್ಲಾದೇಶದ ಜನಕ್ಕೆ ಹೆಮ್ಮೆಯ ದಿನ. 1952ರಲ್ಲಿ ಈ ದಿನದಂದು 'ಬಾಂಗ್ಲ'ಕ್ಕಾಗಿ ಅಲ್ಲಿನ ಹೆಮ್ಮೆಯ ಪುತ್ರ, ಪುತ್ರಿಯರು ಪ್ರಾಣತ್ಯಾಗ ಮಾಡಿ ದೇಶದ ಸ್ವಾತಂತ್ರ್ಯಕ್ಕಾಗಿ ದಾರಿ ತೋರಿಸಿದ್ದರು. ಈ ವರ್ಷ ಆ ದಿನ ಜನತೆ ಹತಾಶೆಯ ಪ್ರತಿ ರೂಪವಾಗಿ ಮೂಡಿಬಂತು,

ಜನತೆಯ ಕಣ್ಣಲ್ಲಿ ಯಾವ ನಂಬಿಕೆಯನ್ನು ಹೊಂದಿರದ ಕಪಟ ಪಾರ್ಲಿಮೆಂಟ್ ಅಧಿವೇಶನ ಆರಂಭಿಸಿದ್ದು ಈಗ ಸರ್ವಾಧಿಕಾರಿ ಆಡಳಿತವರ್ಗ ಹಾಗೂ ಸಾಮಾನ್ಯ ಜನರ ಬೆಂಬಲ ಪಡೆದ ವಿರೋಧ ಪಕ್ಷಗಳ ಜಂಟಿ ಹೋರಾಟಕ್ಕೆ ಹೊಸ ಆಯಾಮ ದೊರೆತಿದೆ ಎಲ್ಲಾ ಪ್ರಯತ್ನಗಳಲ್ಲೂ ನೈಸ್ಪಟ್ಟುಕೊಳ್ಳುತ್ತಿರುವ ಇರ್ಷಾದ್ ಈಗ ತನ್ನ ಸರ್ವಾಧಿಕಾರವನ್ನು ಮುಂದುವರಿಸಲು ಹೊಸ ತಂತ್ರ ಹೂಡುತ್ತಿದ್ದಾನೆ. ಇದರಲ್ಲಿ ಪ್ರಮುಖವಾದದ್ದು 'ಇಸ್ಲಾಂ'ನ್ನು ಬಾಂಗ್ಲ ದೇಶದ ರಾಜ್ಯ ಧರ್ಮವನ್ನಾಗಿ ಸಾರುವಂತದ್ದು, ವಿರೋಧ ಪಕ್ಷಗಳ ಜಂಟಿ ಸಮಿತಿಯು ಇರ್ಷಾದನ ಕ್ರಮವನ್ನು ಖಂಡಿಸಿದ್ದು ಸಂವಿಧಾನದಲ್ಲಿ ಮೂಲಭೂತ ಬದಲಾವಣೆ ಮಾಡುವ ಇಲ್ಲವೇ ಸ್ವಾತಂತ್ರ್ಯ ಹೋರಾಟದ ಆಶಯಗಳನ್ನು ತಿರುಚುವ ಹಕ್ಕಾಗಲಿ ಇರ್ಷಾದ್ ಪ್ರಭುತ್ವಕ್ಕಿಲ್ಲ ಎಂದು ಸಾರಿದೆ.

ಕೋಮುವಾದಿ ರಾಷ್ಟ್ರವನ್ನಾಗಿ ಬಾಂಗ್ಲದೇಶವನ್ನು ಸಾರುವುದನ್ನು ವಿರೋಧಿಸಿ 22 ವಿದ್ಯಾರ್ಥಿ ಸಂಘಟನೆಗಳಜಂಟಿ ಸಮಿತಿ ಮತ್ತು ಸ್ವಾತಂತ್ರ್ಯ ಹೋರಾಟಗಾರರು ಏಪ್ರಿಲ್ 5ರಂದು ರಾಷ್ಟ್ರದಾದ್ಯಂತ ಜಂಟಿ ಮೆರವಣಿಗೆ ನಡೆಸಿದವು, ಅವಾಮಿ ಲೀಗಿನ ಮುಖಂಡ ಶೇಕ್ ಹಸೀನ ಮತ್ತು ನ್ಯಾಷನಲಿಸ್ಟ್ ಪಕ್ಷದ ಮುಂದಾಳು ಬೇಗಂ ಖಲಿದಾ ಜಿಯಾ ಇರ್ಷಾದನ ಮತಾಂಧ ಕ್ರಮವನ್ನು ವಿರೋಧಿಸಿದ್ದಾರೆ, ಬಾಂಗ್ಲದೇಶದ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ಪ್ರಸ್ತುತ ದೇಶದ ಪರಿಸ್ಥಿತಿ ಬಗ್ಗೆ ತೀವ್ರ ಆತಂಕ ವ್ಯಕ್ತ ಪಡಿಸಿದ್ದು ವಿಮೋಚನಾ ಪರವಾದ ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಗೆ ಕರೆ ನೀಡಿದೆ. ಇರ್ಷಾದನ ಸರಕಾರವನ್ನು ಕಿತ್ತೊಗೆದು ಪ್ರಜಾತಂತ್ರವನ್ನು ಮರಳಿ ಸ್ಥಾಪಿಸುವ ಹೋರಾಟವನ್ನು ಇನ್ನಷ್ಟು ವ್ಯಾಪಕಗೊಳಿಸಿ ಬಲಪಡಿಸಲು ಅದು ಕೋರಿದೆ,

ಮುಷ್ಕರಗಳ ಅಲೆ :

ತತ್ತರಿಸಿದ ದ. ಕೊರಿಯಾ

ಸಿಯೋಲಿನಿಂದ ಬಂದ ವರದಿ ಪ್ರಕಾರ ವೇತನ ಹೆಚ್ಚಳಕ್ಕೆ ಒತ್ತಾಯಿಸಿ ದೇಶವ್ಯಾಪ್ತಿ ನಡೆದ ಮುಷ್ಕರಗಳ ಪರಿಣಾಮವಾಗಿ ದಕ್ಷಿಣ ಕೊರಿಯಾ ತೀವ್ರ ಸಂಕಷ್ಟಕ್ಕೆ ಸಿಲುಕಿದೆ. 5,600 ಕೈಗಾರಿಕಾ ಘಟಕಗಳ ಕಾರ್ಮಿಕರು ವೇತನ ಹೆಚ್ಚಳಕ್ಕೆ ಒತ್ತಾಯಿಸಿದ್ದು, 300 ಮುಷ್ಕರಗಳು ನಡೆದು 65 ಇನ್ನು ಪರಿಹಾರ ಕಾಣದಾಗಿವೆ. 23 ಕಲ್ಲಿದ್ದಲು ಗಣಿ ಕಾರ್ಮಿಕರ ಸಂಘಗಳು 15–30 ಶೇಕಡ ವೇತನ ಹೆಚ್ಚಳ ಒತ್ತಾಯಿಸಿ ನೋಟೀಸು ಕೊಟ್ಟಿವೆ, ಶಾಮ್ ಸಂಗ್ ಹಡಗು ನಿರ್ಮಾಣ ಮತ್ತು ಭಾರೀಕೈಗಾರಿಕಾ ಕಂಪನಿಯ 1500 ಕಾರ್ಮಿಕರು 26 ಶೇಕಡ ವೇತನ ಹೆಚ್ಚಳ ಕೋರಿ ಕೆಲಸದಿಂದ ಹೊರನಡೆದಿದ್ದರೆ, ದ.ಕೋರಿಯಾದ 2ನೇ ಅತ್ಯಂತ ದೊಡ್ಡ ಹಡಗು ನಿರ್ಮಾಣ ಕಂಪೆನಿಯಾದ ಡೈವೂನ 3 ಸಾವಿರ ಕಾರ್ಮಿಕರು ಪ್ರದರ್ಶನ ನಡೆಸಿ ಬೇಡಿಕೆ ಈಡೇರಿಸಿಕೊಂಡರು, ಡೈವೂನ 4 ಆಟೋಮೊಬೈಲ್ ಘಟಕಗಳ 9 ಸಾವಿರ ಕಾರ್ಮಿಕರ ಪಿಕೆಟಿಂಗ್ ಕಾರಣವಾಗಿ ಅವು ಮುಚ್ಚಲ್ಪಟ್ಟಿವೆ,

ಎ.ಎನ್.ಸಿ. ಮೇಲೆ ದ. ಆಫ್ರಿಕಾದ ಕೆಂಗಣ್ಣು

ದಕ್ಷಿಣ ಆಫ್ರಿಕಾದ ವರ್ಣಪಕ್ಷಪಾತಿ ಪ್ರಭುತ್ವವು ಆಫ್ರಿಕಾ ಜನತೆಯ ಹೋರಾಟದ ಮುಂಚೂಣಿ ಸಂಘಟನೆಯಾದ ಆಫ್ರಿಕಾ ನ್ಯಾಷನಲ್ ಕಾಂಗ್ರೆಸ್(ಎ.ಎನ್.ಸಿ)ಮೇಲೆ ಮತ್ತೆ ದಾಳಿಯನ್ನು ತೀವ್ರಗೊಳಿಸಿದೆ, ಹಲವಾರು ಮುಖಂಡರ ಕೊಲೆಯ ಪ್ರಯತ್ನ ನಡೆಸಿದೆ,

ಮಾರ್ಚ್ 28 ರಂದು ನಾಲ್ವರು ಎ.ಎನ್.ಸಿ. ಬೆಂಬಲಿಗರ ಮನೆಯ ಮೇಲೆ ದಾಳಿ ಮಾಡಿದ ದ.ಆಫ್ರಿಕಾದ ರಕ್ಷಣಾ ಪಡೆಯೊಂದು ಅವರ ಕೊಲೆ ಮಾಡಿತು. ಇದಕ್ಕಿಂತ ಮೊದಲು ಫ್ರಾನ್ಸಿನಲ್ಲಿ ಸಂಘಟನೆಯ ಪ್ರಮುಖಳಾಗಿದ್ದ ಡೂಲಿಸರನ್ನು ಗುಂಡಿಕ್ಕಿ ಕೊಲ್ಲಲಾಯಿತು, ಬ್ರಸೇಲ್ಸ್‌ನಲ್ಲಿ ಎ.ಎನ್.ಸಿ. ಪ್ರತಿನಿಧಿಯಾಗಿರುವ ಗಾಡಿಫ್ರೇ ಮೇಲೆ ಎರಡು ಬಾರಿ ಗುಂಡಿಕ್ಕಿ ಕೊಲ್ಲಲು ಪ್ರಯತ್ನಿಸಲಾಯಿತು. 18 ಕೆ.ಜಿ. ಸ್ಫೋಟಕಗಳನ್ನೊಳಗೊಂಡ ಟೈಂಬಾಂಬನ್ನು ಅವರ ಕಛೇರಿಯಲ್ಲಿ ಇರಿಸಲಾಗಿತ್ತು. ಮೊಜಾಂಬಿಕಿನ ಮೊಪುಟೋದಲ್ಲಿ ಎ.ಎನ್.ಸಿ. ಹಿರಿಯ ಸದಸ್ಯ ಅಲ್‌ಬಿ ಸಾಚಸ್‌ರವರ ಕಾರಿನ ಮೇಲೆ ಬಾಂಬ್ ಎಸೆಯಲಾಯಿತು, ಅಮೇರಿಕಾ ಸಂಯುಕ್ತ ಸಂಸ್ಥಾನ ಮತ್ತು ಕೆನಡಾದಲ್ಲಿರುವ ಸಂಘಟನೆಯ ಪ್ರತಿನಿಧಿಗಳ ಮೇಲೆ ಜೀವಭಯ ಒಡ್ಡಲಾಗಿದೆ,

ದೈಹಿಕವಾಗಿ ಎ.ಎನ್.ಸಿ. ಮುಖಂಡರನ್ನು ಇಲ್ಲವಾಗಿಸುವ ಮೂಲಕ ಕರಿಯರ ಧೀಮಂತ ಹೋರಾಟವನ್ನು ಸದೆ ಬಡಿಯ ಬಹುದೆಂಬ ತಪ್ಪು ಕಲ್ಪನೆ ದಕ್ಷಿಣ ಆಫ್ರಿಕಾದ ಆಡಳಿತಗಾರರಾಗಿದ್ದಾಗಿ—ಅವರ ಯೋಜನೆ ಪೂರ್ಣ ವಿಫಲವಾಗಲಿದೆ ಎನ್ನುವುದಕ್ಕೆ ಚರಿತ್ರೆಯೇ ಸಾಕ್ಷಿಯಾಗಿದೆ,

ಬೆಳೆಯುತ್ತಿರುವ ಪ್ರತಿರೋಧ ಹೆಚ್ಚುತ್ತಿರುವ ದಬ್ಬಾಳಿಕೆ ಕೊಲೆಘಾತಕತನ

ಬಿಹಾರ

ಪ್ರಜಾತಂತ್ರದ ಬಗ್ಗೆ ಗಿಳಿಪಾಠ ಒಪ್ಪಿಸುವ ರಾಜೀವ್‌ಗಾಂಧಿಯವರು, ದೀನ ದಲಿತರ ಉದ್ಧಾರವೇ ತಮ್ಮ ಪರಮೋದ್ದೇಶವೆಂದು ಇತ್ತೀಚಿಗೆ ಅಂಬೇಡ್ಕರ್ ಜಯಂತಿಯಂದು ಘೋಷಿಸಿದರು. ಸಂದರ್ಭ ದೊರೆತಾಗಲೆಲ್ಲಾ ಹೀಗೆ 'ಅಣಿಮುತ್ತು'ಗಳನ್ನು ಉದುರಿಸುವ ರಾಜೀವ್ ಹಾಗೂ ಕಾಂಗ್ರೆ ರಾಜ್ಯ ಸರ್ಕಾರಗಳ ನೀಚತನ ಅವರ ಕೃತ್ಯಗಳಿಂದ ಮಾತ್ರ ತಿಳಿಯುತ್ತದೆ. ಇಂತಹ ನಿರಂತರ ದಬ್ಬಾಳಿಕೆಗಳ ವಿರುದ್ಧ ಜನತೆ ಪ್ರತಿಭಟಿಸಲಾರಂಭಿಸಿದ್ದನ್ನು ಗಮನಿಸಿ ಬಿಹಾರದಲ್ಲಿ ಮುಖ್ಯಮಂತ್ರಿಯನ್ನೂ ಬದಲಾಯಿಸಿದರು. ರಾಜೀವರ ಮುದ್ದಿನ ಬೆಕ್ಕು [illegible] ರಘಾ ಆಜಾದ್‌ನನ್ನು ಮುಖ್ಯಮಂತ್ರಿ ಗಾದಿಗೆ ಕುಳ್ಳಿರಿಸಿದರು, ಭೂಮಾಲೀಕ ಹಾಗೂ ಪೊಲೀಸರ ದಬ್ಬಾಳಿಕೆಯ ಲೂಟು ಬಂದೂಕಿನಡಿ ನಡಗುತ್ತಲೇ ಬಂದ ಬಿಹಾರದ ಜನತೆಯ ಪರಿಸ್ಥಿತಿ ಸಂಬಂಧಿಸಲಿಲ್ಲ, ಬದಲಾಗಿ ಇನ್ನೂ ಭೀಕರವಾಗುತ್ತಾ ನಡೆದಿದೆ,

ಮಾರ್ಚ್ 10 ರಂದು 11 ಗಂಟೆಯ ನೀರವ ರಾತ್ರಿ, ಎಡಬಿಡದ ಸಂಘಟನಾ ಕೆಲಸಗಳಿಂದ ಬಳಲಿ ಬಂದ ವಿದ್ಯಾರ್ಥಿ ಸಂಗಾತಿ ವಿದ್ಯಾಸಾಗರ್ ಕೋಣೆಯಲ್ಲಿ ಅಡಿಗೆ ತಯಾರಿಯಲ್ಲಿದ್ದರು. ನಿಶ್ಶಬ್ದತೆಯನ್ನು ಬೇಧಿಸಿ ಬಂದ ಗುಂಡುಗಳು ಕಾಮ್ರೇಡ ಸಾಗರ್‌ನ ಎದೆಹೊಕ್ಕವು. ಪ್ರತಿಭಟನೆಯ ಕೊನೆ ಕ್ಷಣಗಳು ಫಲ ನೀಡಲಿಲ್ಲ. ಬಿ.ಎ. ಅಂತಿಮ ವಿದ್ಯಾರ್ಥಿ -ಎಸ್.ಎಫ್.ಐ. ಜಹನಾಬಾದ್ ಜಿಲ್ಲಾ ಸಮಿತಿ ಸದಸ್ಯ ಹಾಗೂ ಪಕ್ಷದ ಸದಸ್ಯ ಕಾಂ॥ ವಿದ್ಯಾಸಾಗರ್ ಕೆಲವು ಗೂಂಡಾಗಳಿಂದ ಕೊನೆಯಾಗಿ ರಕ್ತದ ಮಡುವಿನಲ್ಲಿ ಕೆಂಪಾಗಿ ಹುತಾತ್ಮರಾದರು,

ಈ ಘಟನೆ ನಡೆದ ಕೆಲವೇ ದಿನಗಳಲ್ಲಿ ಅಂದರೆ ಮಾರ್ಚ್-18 ರಂದು ತಮ್ಮ ಹಳ್ಳಿಗೆ ಹಿಂದಿರುಗುತ್ತಿದ್ದ ಡಿ. ವೈ. ಎಫ್. ಐ, ಕಾರ್ಯಕರ್ತ ಕಾಂ॥ ಜೈಲಾಖ್ ಸಿಂಗ್ ಅವರ ಮೇಲೆ ಕೊಲೆಗಡುಕರು ದಾರಿಯಲ್ಲೇ ಆಕ್ರಮಣ ನಡೆಸಿ ಕಾ॥ ಸಿಂಗ್ ಅವರ ತಲೆ ಕಡಿದು, ಅದನ್ನು ತೆಗೆದುಕೊಂಡು ಓಡಿಹೋದರು. 1986 ರಲ್ಲಿ ಡಿ. ವೈ. ಎಫ್. ಐ.ಗೆ ಸೇರಿದ್ದ ಕಾಂ॥ ಜೈಲಾಖ್ ಸಿಂಗ್, ಸಿ. ಪಿ. ಐ. (ಎಂ) ಪಕ್ಷದ ಉಮೇದುವಾರ ಸದಸ್ಯರಾಗಿದ್ದರು.

ಕಾಂ॥ ರಾಮ್‌ಚಿತ್ತಾರ್ ರಾಮ್ ವೈಶಾಲಿ ಜಿಲ್ಲೆಯ ಕುತುಹ್‌ಪುರದ ದಯಾ ಗ್ರಾಮದ ಬಡ ಹರಿಜನ ರೈತ ಕೃಷಿ ಕೂಲಿಕಾರರ ಮತ್ತು ಬಡ ರೈತರನ್ನು ಸಂಘಟಿಸುವಲ್ಲಿ ಶ್ರಮಿಸುತ್ತಿರುವ ಸಂಗಾತಿ, ದಿನದಿನಕ್ಕೂ ಬೆಳೆಯುತ್ತಿರುವ ಸಂಘಟನೆಯಿಂದ ಸ್ಥಳೀಯ ಜಮೀನ್ದಾರರು ಕುಪಿತಗೊಂಡರು. ಮುದ್ರಿಕರಾಯ್ ಎನ್ನುವ ಭೂಮಾಲೀಕ ಹಲವು ಗೂಂಡಾಗಳ ಪಡೆಗಳೊಂದಿಗೆ ಕಾಂ॥ ರಾಮ್ ಅವರ ಮನೆಗೆ ಮುತ್ತಿಗೆ ಹಾಕಿ, ಸಂಘಟನೆಯನ್ನು ಕೈ–ಬಿಡುವಂತೆ ಬೆದರಿಸಿದರು. ಸಂಘಟನೆ ಬಗ್ಗೆ ದೃಢ ನಿರ್ಧಾರ ಪ್ರಕಟಿಸಿದ ಬಳಿಕ ಪೊಲೀಸ್ ಠಾಣೆಯಲ್ಲಿ ದೂರು ನೀಡಿ ರಕ್ಷಣೆ ಕೋರಿದರು. ಇದರಿಂದ ರೊಚ್ಚಿಗೆದ್ದ ಜಮೀನ್ದಾರರ ರಾಯ್ ಮಾರ್ಚ್ 17 ರಂದು ಇನ್ನು ಹೆಚ್ಚಿನ ಗೂಂಡಾಗಳೊಡನೆ ಕಾಂ॥ ರಾಮ್‌ರವರ ಹೊಲದಲ್ಲಿದ್ದ ಸುಮಾರು 10 ಸಾವಿರ ರೂ. ಗಳ ತಂಬಾಕು,ಗೋಧಿ ಬೆಳೆ ನಾಶಪಡಿಸಿದರು. ಮನೆಗೆ ಬಾಂಬ್ ಎಸೆದು ಬೆಂಕಿಹಚ್ಚಿದರು, ಸಂಘಟನೆ ನಿಲ್ಲಿಸದಿದ್ದರೆ ಕೊಲೆ ಮಾಡುವುದಾಗಿ ತಿಳಿಸಿದರು. ಮತ್ತೆ ಪೊಲೀಸ್ ಠಾಣೆಗೆ ಹೋದರೆ ಪ್ರತಿಕ್ರಿಯೆ ಶೂನ್ಯ. ದೀನ ದುರ್ಬಲರನ್ನು ಸಂರಕ್ಷಿಸುವ 'ವಾರಸುದಾರ ಪೊಲೀಸರು' ಜಮೀನ್ದಾರರ ಜೇಬಿನಲ್ಲಿದ್ದರು,

ಬಿಹಾರದ ಪರಾರಿಯ ಎಂಬಲ್ಲಿ ಬುಡಕಟ್ಟು ಮಹಿಳೆಯರ ಮೇಲೆ ಪೊಲೀಸರಿಂದ ಸಾಮೂಹಿಕ ಅತ್ಯಾಚಾರ ನಡೆದ ಕೆಲವೇ ದಿನಗಳಲ್ಲಿ [illegible] ಜಿಲ್ಲೆಯಲ್ಲಿ ದಬ್ಬಾಳಿಕೆ [illegible] ಘಟನೆ [illegible]

(2ನೇ ಪುಟ ನೋಡಿ)

(1ನೇ ಪುಟದಿಂದ)

ಬಾಗ ಮಾಡಿದ ಭಾಷಣಗಳ ವೈಖರಿಯನ್ನು ನಾವು ಒಪ್ಪುವುದಿಲ್ಲ. ಭಿನ್ನಾಭಿಪ್ರಾಯಗಳನ್ನು ನಿವಾರಿಸುವ ಕ್ರಮ ಅದಲ್ಲ. ತನ್ನ ಪಕ್ಷ ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಆ ರೀತಿಯ ಸಂಚಾರ ಮತ್ತು ಭಾಷಣ ಯಾವ ರೀತಿಯಲ್ಲಿಯೂ ಸಹಾಯಕವಾಗುವುದಿಲ್ಲ ಎಂಬ ಅಂಶವನ್ನು ಹೆಗಡೆಯಂಥವರು ಅರಿತುಕೊಳ್ಳಬೇಕಾಗಿತ್ತು. ಹಾಗೆಯೇ ರಾಜ್ಯಸಭೆ ಚುನಾವಣೆಯಲ್ಲಿ ರಾಮಜೆಠ್ಮಲಾನಿಯವರನ್ನು ಜನತಾ ಪಕ್ಷದ ಅಭ್ಯರ್ಥಿಯನ್ನಾಗಿ ನಿಲ್ಲಿಸುವ ಮುಂಚೆ ಅದರ ಪರಿಣಾಮವೇನಾದೀತೆಂಬುದರ ಕುರಿತೂ ಕೂಡ ಹೆಗಡೆಯವರು ಚಿಂತಿಸಬೇಕಾಗಿತ್ತು. ಹೀಗೆ ಜನತಾಪಕ್ಷದೊಳಗೆ ಭಿನ್ನಾಭಿಪ್ರಾಯ ಬಿಗಿದೊಳ್ಳಲಿಕ್ಕೆ ರಾಮಕೃಷ್ಣ ಹೆಗಡೆಯವರೇ ಜವಾಬ್ದಾರರೆಂಬುದನ್ನು ಮರೆಯಬಾರದು.

ಜನತಾಪಕ್ಷದ ಕೇಂದ್ರ ಮುಖಂಡರಲ್ಲಿರುವ ಭಿನ್ನಾಭಿಪ್ರಾಯಗಳೂ, ಅಖಿಲ ಭಾರತ ಮಟ್ಟದಲ್ಲಿ ವಿರೋಧ ಪಕ್ಷಗಳ ವಿಲೀನ, ಬಿ.ಜೆ.ಪಿ.ಯ.ಂಥ ಜಾತೀಯ ಪಕ್ಷಗಳೊಡನೆ ಸಂಬಂಧ ಮೊದಲಾದ ವಿಷಯಗಳ ಕುರಿತು ಜನತಾ ಪಕ್ಷದ ಅಧ್ಯಕ್ಷರಾದ ಚಂದ್ರಶೇಖರ ಮತ್ತು ರಾಮಕೃಷ್ಣ ಹೆಗಡೆಯವರ ಮಧ್ಯೆ ಭಿನ್ನಾಭಿಪ್ರಾಯಗಳಿವೆಂಬ ವಿಷಯ ಎಲ್ಲರಿಗೂ ಗೊತ್ತು. ಕರ್ನಾಟಕದ ಜನತಾ ಪಕ್ಷದೊಳಗೆ ಮೂಡಿಬಂದಿರುವ ಹೆಗಡೆ ವಿರೋಧಿ ಚಳುವಳಿಗೆ ಅಖಿಲ ಭಾರತ ಮಟ್ಟದಲ್ಲಿರುವ ಭಿನ್ನಾಭಿಪ್ರಾಯಗಳೂ ಕಾರಣವಾಗಿರಬಹುದಾಗಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಜನತಾ ಪಕ್ಷದೊಳಗಿನ ಅಂತರಿಕ ವಿಚಾರಗಳಲ್ಲಿ ಕೈಹಾಕಲಿಚ್ಛಿಸದಿದ್ದರೂ ಕೂಡ, ಇಡೀ ದೇಶದ ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ರಾಜೀವಗಾಂಧಿಯವರು ದೇಶದ ಐಕ್ಯತೆ-ಸಮಗ್ರತೆಯನ್ನು ಉಳಿಸಿಕೊಳ್ಳಲು, ಛಿದ್ರಕಾರಿ ಶಕ್ತಿಗಳನ್ನೂ ಪ್ರತ್ಯೇಕವಾದಿಗಳನ್ನೂ ನಾಶಮಾಡಲು, ಜಾತೀಯ-ಮತೀಯ ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಹೋರಾಡಲು ತಮ್ಮ ಅಸಾಮರ್ಥ್ಯವನ್ನು ಪ್ರದರ್ಶಿಸಿ, ತನ್ನ ಅಧಿಕಾರ ಉಳಿಸಿಕೊಳ್ಳಲು ತುರ್ತುಪರಿಸ್ಥಿತಿಯನ್ನು ಮತ್ತೊಮ್ಮೆ ಘೋಷಿಸುವ ಪ್ರಯತ್ನದಲ್ಲಿದ್ದಾಗ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ದೇಶದ ಎಲ್ಲ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳನ್ನೆಲ್ಲ ಒಂದು ಗೂಡಿಸಿ ರಾಜೀವಗಾಂಧಿಯವರ ಕೇಂದ್ರ ಸರಕಾರದ ವಿರುದ್ಧ, ಐಕ್ಯ ಹೋರಾಟ ನಡೆಸುತ್ತಿರುವಾಗ, ಜನತಾ ಪಕ್ಷ ತನ್ನ ಅಂತರಿಕ ಭಿನ್ನಾಭಿಪ್ರಾಯಗಳನ್ನು ಸೌಹಾರ್ದಯುತವಾಗಿ ಬಗೆಹರಿಸಿಕೊಂಡು ಸಿ.ಪಿ.ಐ. (ಎಂ) ನಡೆಸುತ್ತಿರುವ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕೆಂದು ಇಚ್ಛಿಸುತ್ತದೆ. ಆ ಕಾರಣದಿಂದಲೇ ಜನತಾ ಪಕ್ಷದ ಮುಖಂಡತ್ವ ಸರಿಯಾದ ಧೋರಣೆಯನ್ನು ಅನುಸರಿಸಿಕೊಂಡು ರಾಜೀವಗಾಂಧಿಯವರ ರಾಜೀನಾಮೆಗಾಗಿ ನಡೆಯುತ್ತಿರುವ ಹೋರಾಟದಲ್ಲಿಯೂ, ದೇಶದಲ್ಲಿ ಪರ್ಯಾಯ ವ್ಯವಸ್ಥೆ ರೂಪಿಸುವುದರಲ್ಲಿಯೂ ಸಹಾಯಕನಾಗಬೇಕೆಂದು ಅಪೇಕ್ಷಿಸುತ್ತದೆ. ಆ ಕಾರಣದಿಂದಲೇ ಜನತಾ ಪಕ್ಷದ ಮುಖಂಡರ ಮಧ್ಯೆ ಇರುವ ಭಿನ್ನಾಭಿಪ್ರಾಯಗಳನ್ನು ನಿವಾರಿಸಿ ಅವರಲ್ಲಿ ಐಕ್ಯತೆ ತರುವಲ್ಲಿ ಸಿ.ಪಿ.ಐ. (ಎಂ) ಮಧ್ಯೆ ಪ್ರವೇಶಿಸಿ ಸಹಾಯ ಮಾಡುತ್ತದೆ

ಕರ್ನಾಟಕದಲ್ಲಿ ಕೂಡ ಜನತಾ ಪಕ್ಷದಲ್ಲಿ ಐಕ್ಯತೆ ಉಂಟಾಗುವಂತೆ ಮಾಡಲು ಸಿ.ಪಿ.ಐ. (ಎಂ) ಪ್ರಯತ್ನ ಮಾಡಿದೆ. ಈಗಲೂ ಆ ಪ್ರಯತ್ನ ಮುಂದುವರಿಸಿದೆ.

ಇನ್ನೆರಡು ವರ್ಷಗಳಲ್ಲಿಯೇ ಚುನಾವಣೆ ಎದುರಿಸಬೇಕಾಗಿರುವುದರಿಂದ ಈಗಿರುವ ಮುಖಂಡತ್ವವನ್ನು ಮುಂದುವರಿಸಿಕೊಂಡು ಹೋಗಬೇಕು, ಅಂತರಿಕ ಭಿನ್ನಾಭಿಪ್ರಾಯಗಳನ್ನು ಚರ್ಚಿಸಿ ಬಗೆಹರಿಸಿಕೊಳ್ಳಬೇಕು, ಮಂತ್ರಿಮಂಡಲವನ್ನು ಪುನರ್ರಚಿಸಿ ಚಿಕ್ಕ-ಚೊಕ್ಕ ಮಂತ್ರಿಮಂಡಲ ಅಸ್ತಿತ್ವದಲ್ಲಿ ಬರಬೇಕು, ಆಡಳಿತೆ ಚುರುಕಾಗಬೇಕು, ಭ್ರಷ್ಟಾಚಾರ ತಡೆಗಟ್ಟಬೇಕು, ಇವು ನಮ್ಮ ಅಪೇಕ್ಷೆ, ಆದ್ದರಿಂದ ಜನತಾ ಪಕ್ಷದಲ್ಲಿ ಒಗ್ಗಟ್ಟು ಅಗತ್ಯ. ಆದ್ದರಿಂದ ಜನತಾ ಪಕ್ಷದ ಮುಖಂಡರು ಎಚ್ಚರದಿಂದ ವರ್ತಿಸುವುದು ಅತ್ಯಗತ್ಯ.

(3ನೇ ಪುಟದಿಂದ)

ಅದಿನ ಸರ್ಕಾರದ ಉಗ್ರನೀತಿ ಜನರು ಕ್ರಾಂತಿಯಿಂದ ಹೆದರಿ ದೇಶ ಓಡಿ ಹೋಗುವಂತೆ ಮಾಡಿತು.

ಸಾಮ್ರಾಜ್ಯಶಾಹಿ ಪಿತೂರಿ

ಕ್ರಾಂತಿಯ, ಪಕ್ಷದ ಈ ಸಮಸ್ಯೆಗಳನ್ನು ಸಾಮ್ರಾಜ್ಯಶಾಹಿ ಮತ್ತು ಅವರ ಪಾಳೆಯಗಾರಿ ಪ್ರತಿಗಾಮಿ ಹಿಂಬಾಲಕರು ಸಂಪೂರ್ಣವಾಗಿ ದುರುಪಯೋಗ ಪಡಿಸಿಕೊಂಡರು. ಕ್ರಾಂತಿಯಾದ ಕೂಡಲೇ ದೇಶ ಬಿಟ್ಟು ಪರಾರಿಯಾಗಿದ್ದ ಈ ಶಕ್ತಿಗಳು ಜನ ಬೆಂಬಲಗಳಿಸಲು, ನಿರಾಶ್ರಿತರ ಸಮಸ್ಯೆ ಸೃಷ್ಟಿಸಲು ಅಮೀನ್‌ರ ಕೆಲವೇ ತಿಂಗಳುಗಳ ದುರಾಡಳಿತ ಕಾರಣವಾಯಿತು. ವಿಶೇಷವಾಗಿ ಧರ್ಮದ ಬಗೆಗಿನ ಜನರ ಭಾವನೆಗಳನ್ನು ಅಮೀನ್ ಸರ್ಕಾರದ ಧರ್ಮ-ವಿರೋಧಿ ಉಗ್ರ ನೀತಿಯ ಹಿನ್ನೆಲೆಯಲ್ಲಿ ಬಳಸಿಕೊಳ್ಳಲಾಯಿತು. ಯಾವೊಂದು ಕ್ರಾಂತಿ ಇಷ್ಟು ದೊಡ್ಡ ಪ್ರಮಾಣದ ನಿರಾಶ್ರಿತರ ಸಮಸ್ಯೆಗೆ ಕಾರಣವಾದದ್ದಿಲ್ಲ. ಈ ನಿರಾಶ್ರಿತರ ಮೇಲೆ ಆಧಾರಿತ ಸಾಮ್ರಾಜ್ಯಶಾಹಿ ಬೆಂಬಲವಿರುವ ಧಾರ್ಮಿಕ ಹೋರಾಟದ ಸಂಘಟನೆಗಳನ್ನು ಪಾಕಿಸ್ತಾನದಲ್ಲಿ ಕಟ್ಟಿ ಅಫ್‌ಘಾನ್ ಸರ್ಕಾರಕ್ಕೆ ಸವಾಲೆಸೆಯಲಾಯಿತು. ಇದನ್ನು ಮನಗಂಡ PDPA ಪಕ್ಷದ ಹಲವು ನಾಯಕರು ಕಾರ್ಯಕರ್ತರು ಅಮೀನರನ್ನು ಅಧಿಕಾರದಿಂದ ಕಿತ್ತೊಗೆದರು. ಆದರೆ ಈಗಾಗಲೇ ಆಗಿಹೋಗಿದ್ದ ಪ್ರಮಾದಗಳ ಆಧಾರದ ಮೇಲೆ ಸಾಮ್ರಾಜ್ಯಶಾಹಿ ನಡೆಸಿದ ಆಕ್ರಮಣ ಇಡೀ ಕ್ರಾಂತಿಯನ್ನು ನಿರ್ನಾಮ ಮಾಡುವ ಸಾಧ್ಯತೆ ಇತ್ತು. ಇಂತಹ ಪರಿಸ್ಥಿತಿಯಲ್ಲಿ PDPA ಸರ್ಕಾರ ಸೋವಿಯೆತ್ ಸೈನ್ಯ ನೆರವು ಕೇಳಿತು–ಸೋವಿಯೆತ್–ಅಫ್‌ಘಾನ್ ಮೈತ್ರಿ ಒಪ್ಪಂದದ ಆಧಾರದ ಮೇಲೆ. ಆದ್ದರಿಂದ ಯಾವುದೇ ರೀತಿಯಲ್ಲಿ ಇದನ್ನು 'ಆಕ್ರಮಣ' ಎಂದು ಹೇಳುವಂತಿಲ್ಲ. ಸೋವಿಯೆತ್ ಸೈನ್ಯ ಬರುವ ಹಲವು ತಿಂಗಳುಗಳ ಮೊದಲು CIA 'ಧಾರ್ಮಿಕ ಹೋರಾಟದ ಪಡೆಗಳಿಗೆ ಶಸ್ತ್ರಾಸ್ತ್ರ, ಧನ ಸಹಾಯ ಮಾಡಲು ಆರಂಭಿಸಿತ್ತು. ನಿಜವಾಗಿಯೂ ಅಫ್‌ಘಾನ್ ರಾಷ್ಟ್ರೀಯ ಹಿತಾಸಕ್ತಿಗಳಿಗೆ ವಿರುದ್ಧವಾಗಿ ಹಸ್ತಕ್ಷೇಪ ನಡೆಸಿ ಅದರ ಸಾರ್ವಭೌಮತ್ವವನ್ನು ಉಲ್ಲಂಘಿಸಿದ್ದು, ಸಾಮಾಜಿಕ ಬದಲಾವಣೆಗಳನ್ನು ತಡೆಹಿಡಿಯಲು ಪ್ರಯತ್ನಿಸಿದ್ದು ಈಗ ಅಮೇರಿಕನ್ ಮತ್ತು ಹಿಂದೆ ಬ್ರಿಟಿಷ್‌ಸಾಮ್ರಾಜ್ಯಶಾಹಿ, ಈ ಪಿತೂರಿಯ ವಿರುದ್ಧ ಕ್ರಾಂತಿಯ ರಕ್ಷಣೆಗೆ ಸೋವಿಯೆತ್ ಸೈನ್ಯದ ಸಹಾಯ ಅಗತ್ಯವಾದದ್ದು. ಅಂದಿನಿಂದಲೂ ಸೋವಿಯೆತ್-ಅಫ್‌ಘಾನಿಸ್ತಾನ ಸರ್ಕಾರಗಳು ಸಾಮ್ರಾಜ್ಯಶಾಹಿ ಹಸ್ತಕ್ಷೇಪ ನಿಂತು ಶಾಂತಿಯುತ ಪರಿಸ್ಥಿತಿ ಉಂಟಾದ ಮರುದಿನ ಸೋವಿಯೆತ್ ಪಡೆಗಳು ನಿರ್ಗಮಿಸುತ್ತವೆ ಎಂದು ಹೇಳುತ್ತಿದ್ದಾರೆ. ಅಂತಹ ಪರಿಸ್ಥಿತಿ ನಿರ್ಮಾಣ ಮಾಡಲು ಶ್ರಮಿಸಿದ್ದಾರೆ, ಅದರ ಉದ್ದೇಶ ಪೂರ್ತಿಯಾಗಿರುವುದರಿಂದ ಸೋವಿಯೆತ್ ಪಡೆಗಳು ಹಿಂದಿರುಗುತ್ತಿವೆ,

PDPA ಸರ್ಕಾರ ,ಅಮೀನ್ ದುರಾಡಳಿತದ ನೀತಿಗಳನ್ನು ಸರಿಪಡಿಸಿಕೊಂಡು ಕ್ರಾಂತಿಯನ್ನು ಮುಂದೆ ಕೊಂಡೊಯ್ಯುತ್ತಿದೆ.

ರೈತಸಂಘದ ಗ್ರಾಮ ಘಟಕ

ಹಾನಗಲ್ ತಾಲ್ಲೂಕು ಗೊಂದಿ ಗ್ರಾಮದಲ್ಲಿ ಪ್ರಾಂತ ರೈತ ಸಂಘದ ಗ್ರಾಮಘಟಕವನ್ನು ಏಪ್ರಿಲ್ 20 ರಂದು ರಚಿಸಲಾಯಿತು. ಅಂದು ಸಂಜೆ 6 ಗಂಟೆಗೆ ನೂರಾರು ರೈತರು ಮೆರವಣಿಗೆ ನಡೆಸಿ ಬಹಿರಂಗ ಸಭೆ ನಡೆಸಲಾಯಿತು. ರೈತ ಸಂಘದ ಕಛೇರಿ ಉದ್ಘಾಟಿಸಿ ಧ್ವಜಾರೋಹಣ ಮಾಡಲಾಯಿತು. ಅಧ್ಯಕ್ಷರಾಗಿ ಕಾ॥ ಈರಪ್ಪಹಳ್ಳದ ಕನ್ನಪ್ಪ ಬಗೇರ(ಉಪಾಧ್ಯಕ್ಷ) ಮಾಲತೇಶ್ (ಕಾರ್ಯದರ್ಶಿ) ಮಲ್ಲಪ್ಪ ಮಾಡೇರ ಸಹಕಾರ್ಯದರ್ಶಿ) ರುದ್ರಪ್ಪಹಳ್ಳದ (ಖಜಾಂಚಿ) ಯಾಗಿ ಚುನಾಯಿತರಾದರು. ಗುತ್ತೆವ್ವ ಡೊರಳೇಶ್ವರ, ಗಂಗವ್ವ ಕೆರಳ್ಳಿ, ಗುತ್ತೆಪ್ಪ ಗೊರನರಿ, ಪ್ರಭುಲಿಂಗಪ್ಪ ಶಿವಣ್ಣರವರುಗಳು ಸಮಿತಿಗೆ ಆಯ್ಕೆಯಾದರು.

ಬಹಿರಂಗಸಭೆಯನ್ನುದ್ದೇಶಿಸಿ ಕಾ॥ ನಾಗಪ್ಪಕ್ಷವರದ, ಮಲ್ಲಪ್ಪ ಗಡಿಯಂಣರ ಮಲ್ಲಪ್ಪ ಮೂಡೇರರವರುಗಳು ಮಾತನಾಡಿದರು.

ಸೌಲಭ್ಯ ಒತ್ತಾಯಿಸಿ ರಸ್ತೆ ರೋಖೋ

ಬಳ್ಳಾರಿಜಿಲ್ಲೆಯ ಹೂವಿನ ಹಡಗಲಿ ತಾಲೂಕಿನ ಮಸಲವಾಡದ ಜನತೆ ಎದುರಿಸುತ್ತಿರುವ ಹಲವಾರು ಜ್ವಲಂತ ಸಮಸ್ಯೆಗಳ ಪರಿಹಾರಕ್ಕಾಗಿ ಸ್ಥಳೀಯ ಎಸ್.ಎಫ್.ಐ., ವಿನಾಯಕ ಯುವಕಸಂಘ ಹಾಗೂ ಕೊಳಚೆ ಪ್ರದೇಶದ ಜನರೆಲ್ಲ ಒಟ್ಟಾಗಿ ಏಪ್ರಿಲ್ 25ರಂದು ರಸ್ತೆ ರೋಖೋ ಚಳುವಳಿ ನಡೆಸಿದರು. ಸ್ಥಳೀಯ ಸಾರ್ವಜನಿಕ ಆಸ್ಪತ್ರೆಗೆ ಸ್ವಂತ ಕಟ್ಟಡ ಖಾಯಂ ವೈದ್ಯರ ನೇಮಕ, ಟಾರ್ ರಸ್ತೆ, ಬಸ್ ಸೌಲಭ್ಯ ಪ್ರೌಢ ಶಾಲೆ ಕಟ್ಟಡ ಹಾಗೂ ಹಾಸ್ಟೆಲ್ ಸೌಲಭ್ಯ, ಪಶು ಚಿಕಿತ್ಸಾಲಯ, ಮುಂತಾದ ಬೇಡಿಕೆ ಮುಂದಿಟ್ಟು ನಡೆದ ಚಳುವಳಿ ಸಂದರ್ಭದಲ್ಲಿ ಸಂಬಂಧ ಪಟ್ಟ ಅಧಿಕಾರಿಗಳು ಹಾಗೂ ಜನತಾಪಕ್ಷದ ಸ್ಥಳೀಯ ಅಧ್ಯಕ್ಷರು ಬಂದು ಸಮಸ್ಯೆಗಳನ್ನು ಬಗೆಹರಿಸುವುದಾಗಿ ಆಶ್ವಾಸನೆ ನೀಡಿದನಂತರ ರಸ್ತೆ ತಡೆ ಚಳುವಳಿ ನಿಲ್ಲಿಸಲಾಯಿತು.

ವಿವಿಧೆಡೆ: ಮೇ ದಿನಾಚರಣೆ

ಆಳಂದ ತಾಲ್ಲೂಕು

ಗುಲ್ಬರ್ಗಾಜಿಲ್ಲೆಯ ಆಳಂದ ತಾಲ್ಲೂಕಿನ ವಿವಿಧ ಕಡೆ ಮೇ ದಿನಾಚರಣೆ ನಡೆಸಿದ ವಿವರ ಬಂದಿದೆ. ಅಂಬಲಗಾದಲ್ಲಿ ನೂರಾರು ಕಾರ್ಯಕರ್ತರು ರೈತಸಂಘದ ಕಛೇರಿ ಎದುರ ಸಭೆ ನಡೆಸಿದರು. ಕಲ್ಲಪ್ಪದೇಲಿ, ಮೇಘರಾಜ ಕಠಾರೆ, ಬಸವರಾಜ ಜಮಳೆ, ಕಲತೊಟಗಿ, ಲೆಂಗಟಿರವರುಗಳು ಮಾತನಾಡಿದರು.

ಲಾಡ—ಮುಗಳಿ : ರೈತಸಂಘದ ಕಛೇರಿ ಮುಂದೆ ಧ್ವಜಾರೋಹಣ ಮಾಡಿ ನಡೆದ ಸಭೆಯಲ್ಲಿ ಅರವಿಂದ ಹಾಗೂ ರೈತಸಂಘದ ಕಾರ್ಯದರ್ಶಿ ಬಾಬು ಮುಗಳಿಯವರು ಮಾತನಾಡಿದರು.

ಸಲಗರ ವಿ.ಕೆ. : ರೈತಸಂಘದ ಕಛೇರಿಯಲ್ಲಿ ನಡೆದ ಸಭೆಯಲ್ಲಿ ನೌಕರ ಮಹಾತಂಪ್ಪ ಧ್ವಜಾರೋಹಣ ಮಾಡಿದರು. ಗುಂಡಪ್ಪ ಗುಗಳೆ ಅಥಿತಿಗಳಾಗಿ ಚಿತ್ರಶಾ ಬಂಕೂರ ಮಾತನಾಡಿದರು.

ಶಾಹಾಪುರ

ಹೊಸದುರ್ಗ ತಾಲ್ಲೂಕು ಶಾಹಾಪುರದಲ್ಲಿ ದಿನಗೂಲಿ ನೌಕರರ ಸಂಘ ಹಾಗೂ ಭಾರತ ವಿದ್ಯಾರ್ಥಿ ಫೆಡರೇಷನ್ ಜಂಟಿಯಾಗಿ ಮೇ ದಿನಾಚರಣೆಯನ್ನು ಆಚರಿಸಿದವು. ಸುರಪುರದ ವಕೀಲರಾದ ಜೆ. ಅಗಸ್ಟೀನ್ ರವರು ಅಧ್ಯಕ್ಷತೆ ವಹಿಸಿದ್ದರು. ಶ್ರಮಿಕವರ್ಗದ ಮಹಾನ್ ಚಿಂತಕ ಕಾರ್ಲ್‌ಮಾರ್ಕ್ಸ್ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಲಾಯಿತು.

ಮುಖ್ಯ ಅತಿಥಿಗಳಾಗಿ ಸುರಪುರದ ಪ್ರಭು ಕಾಲೇಜು ಉಪನ್ಯಾಸಕ ಪ್ರೊ॥ ಎಲ್. ಬಿ. ಇಟ್ಟಿನ್, ಕಾರ್ಯನಿರ್ವಹಕ ಅಭಿಯಂತರಾದ ಹಣಮೇಗೌಡ, ಕೃಷ್ಣಾ ಮೇಲ್ದಂಡೆ ಯೋಜನೆ ಹೊಸದುರ್ಗ ತಿರುಕಪ್ಪ ಸಹಾಯಕ ಕಾರ್ಯ ನಿರ್ವಹಕ ಅಭಿಯಂತರರು ಭಾಗವಹಿಸಿದ್ದರೂ ಸಿ.ಪಿ.ಐ.ಎಂ. ನಾಯಕ ಕಾ॥ ಚನ್ನಪ್ಪ ಆನೆಗುಂದಿಯವರು ಮೇ ದಿನದ ಮಹತ್ವದ ಬಗ್ಗೆ ವಿವರಿಸಿದರು. ಎಸ್.ಎಫ್.ಐ. ಮುಖಂಡ ಚನ್ನಬಸ್ಸು ಮಾತನಾಡಿದರು. ತಿಮ್ಮಪ್ಪನಾಯಕ ವಂದನಾರ್ಪಣೆ ಮಾಡಿದರು.

ಗುಲ್ಬರ್ಗ

ಗುಲ್ಬರ್ಗಾನಗರದಲ್ಲಿ ಸಿ.ಪಿ.ಐ.(ಎಂ) ಪಕ್ಷದಕಛೇರಿ, ಎಂ.ಎಸ್.ಕೆ. ಮಿಲ್ ವರ್ಕರ್ಸ್‌ಯುನಿಯನ್ ಕಛೇರಿ ಹಾಗೂ ಪಂಚಶೀಲಾ ನಗರದಲ್ಲಿ ಮೇ ದಿನಾಚರಣೆಯನ್ನು ನಡೆಸಲಾಯಿತು. ಕಾ॥ ಕಲ್ಲಪ್ಪ ಕಿರಣಗಿ, ಸಿ.ಎ.ಪಾಟೀಲ್ ಹಾಗೂ ಮಹ್ಮದ್ ಹುಸೇನ್ ರವರುಗಳು ಧ್ವಜಾರೋಹಣ ಮಾಡಿದರು. ವಿಶ್ವಶಾಂತಿ, ಮೇ ದಿನದ ಮಹತ್ವದ ಕುರಿತು ಜಿಲ್ಲಾ ಪರಿಷತ್ ಸದಸ್ಯ ಮಾರುತಿ ಮಾನ್ಪಡೆ, ಹಾಗೂ ರೈತ ಕಾರ್ಮಿಕ ವಿದ್ಯಾರ್ಥಿ ಯುವಜನ ನಾಯಕರುಗಳು ಮಾತನಾಡಿದರು.

(1ನೇ ಪುಟದಿಂದ)

ಸೂಚನೆಗೆ ಈಗ ಜ್ಯೋತಿಬಸು ಒಪ್ಪಿದ್ದಾರೆ.

ಘೂರ್ಕಾ ಸಮಸ್ಯೆ ಪರಿಹಾರದ ಬಗ್ಗೆ ಕೇಂದ್ರ ಸರ್ಕಾರ ಮತ್ತು ಪಶ್ಚಿಮ ಬಂಗಾಳ ರಾಜ್ಯ ಸರ್ಕಾರದ ನಡುವೆ ಸಂಪೂರ್ಣ ಒಮ್ಮತವಿದ್ದು ಘೀಸಿಂಗ್‌ರು ತಮ್ಮ ವಚನ ಪಾಲಿಸುವಂತೆ ಗೃಹಮಂತ್ರಿ ಬೂಟಾಸಿಂಗ್ ಮಾಡಬಲ್ಲರೇ ಎಂಬುದನ್ನು ಕಾದು ನೋಡಬೇಕು.

Printed & Published by P. Ramachandra Rao on be half of the Communist Party of India [Maxist] Karnataka State Committe,
K.V. Temple Street, Sultanpet, Banore-560053 Editorial and Managerial Office: L-56 K.V. Temple Street, Sultanpet B-53
Phone: 75331 ARASA Mudrana B-40 Editor: P. RamachandraRao Managing Editor: N.K. Upadhyaya